# ಕಂಪು ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಯುಗಾದಿ ಸಂಚಿಕೆ

ಸಂಪುಟ 1 ಸಂಚಿಕೆ 3

Newsletter of MKANT
Yugadi 2011

www.mallige.org


## ಈ ಸಂಚಿಕೆಯಲ್ಲಿ


| | |
|---|---|
| ಯುಗಾದಿ ಹಬ್ಬದ ಆಚರಣೆ | 1 |
| ಅಧ್ಯಕ್ಷರ ಸಂದೇಶ | 3 |
| ಕನ್ನಡತನ | 4 |
| ಖೋ-ಖೋ ಕತೆ | 5 |
| Teenage ಯುಗಾದಿ ಸಂಭ್ರಮ | 6 |
| ಸಂಪಾದಕೀಯ | 7 |
| Kids- Corner | 8 |
| ಕೆಣಕು-ತಿಣುಕು | 8 |
| ಶುಭಾಶಯ | 9 |
| ಮಲ್ಲಿಗೆ ಮೊಗ್ಗುಗಳು | 10 |
| ಪಾಕಂಪಪ್ಪು | 11 |
| UGAADI—A Celebration of Joy | 13 |
| ಟೀಕೆ-ಟಿಪ್ಪಣಿ | 14 |
| ಆಸ್ಟ್ರೇಲಿಯ ಯುಗಾದಿ | 15 |
| ನೆರೆಮನೆಯ ನರುಗಂಪು | 16 |


# ಯುಗಾದಿ ಹಬ್ಬದ ಆಚರಣೆ

- ಎಲ್.ಟಿ. ಕಲ್ಯಾಣಿ



## ಯುಗಾದಿ ಹಬ್ಬದ ಆಚರಣೆ

ಭಾರತದಲ್ಲಿ ಧಾರ್ಮಿಕ ಆಚರಣೆಗಳು, ಹಬ್ಬಹರಿದಿನಗಳು ಸಾಮಾಜಿಕ ಜೀವನದೊಂದಿಗೆ ಬೆರೆತುಕೊಂಡಿರುತ್ತವೆ. ಹಬ್ಬಗಳ ಆಚರಣೆಯ ಜೊತೆಯಲ್ಲಿ ಜೀವನ ಮಾರ್ಗದ ಸಂದೇಶವನ್ನು ಕಾಣುತ್ತೇವೆ.

ಬ್ರಹ್ಮನು ಈ ಜಗತ್ತನ್ನು ಚೈತ್ರ ಶುದ್ಧ ಪ್ರತಿಪದೆಯಂದು ಸೂರ್ಯೋದಯದ ಕಾಲಕ್ಕೆ ಸೃಷ್ಟಿಸಿದ. ಅಂದೇ ಗ್ರಹ-ನಕ್ಷತ್ರ-ಋತು-ಮಾಸ-ವರ್ಷ-ವರ್ಷಾಧಿಪತಿಯನ್ನು ಸೃಷ್ಟಿಸಿ ಕಾಲಗಣನೆಯನ್ನು ಆರಂಭಿಸಿದ.

ಚಂದ್ರನ ಚಲನೆಯನ್ನನುಸರಿಸಿ ಅಮಾವಾಸ್ಯೆ-ಹುಣ್ಣಿಮೆಗಳ ಆಧಾರದ ಮೇಲೆ ಮಾಸಗಣನೆ ಮಾಡುವ ಪದ್ಧತಿಗೆ ಚಾಂದ್ರಮಾನ ಎಂದು ಹೆಸರು. ಹುಣ್ಣಿಮೆಯ ದಿನ ಚಂದ್ರ ಯಾವ ನಕ್ಷತ್ರದಲ್ಲಿರುವನೋ ಆ ಹೆಸರಿನಿಂದಲೇ ಆಯಾ ಮಾಸವನ್ನು ಕರೆಯುವರು. ಇಲ್ಲಿಯ ತಿಥಿಗಳು ಮಾಸಗಳು ಎಲ್ಲವೂ ಖಗೋಳದಲ್ಲಿ ಸಂಭವಿಸುವ ಘಟನೆಗಳಿಗೆ ಸಂವಾದಿಯಾಗಿವೆ. ಪ್ರಸಿದ್ಧ ಖಗೋಳ ವಿಜ್ಞಾನಿ ವರಾಹ ಮಿಹಿರಾಚಾರ್ಯರು ವಸಂತ ವಿಷುವತ್ ಅಶ್ವಿನಿಯಲ್ಲಿ ಪರಿಗಣಿಸಿ ಚೈತ್ರ ಶುದ್ಧ ಪಾಡ್ಯ ಹೊಸ ವರ್ಷವೆಂದು ದೃಢೀಕರಿಸಿದ್ದಾರೆ.

ಹೊಸಯುಗದ ಅವತರಣವೇ ಯುಗಾದಿ. ಅಂದರೆ ಯುಗದ ಆದಿ ಯುಗಾದಿ. ಬ್ರಹ್ಮದೇವನು ಸೃಷ್ಟಿಯ ಆರಂಭಕ್ಕೆ ನಾಂದಿ ಹಾಡಿದ ದಿನ ಚಾಂದ್ರಮಾನ ಯುಗಾದಿ. ಮಾಗಿ ಚಳಿ ಕಳೆದು ಹೋಳಿಯ ರಂಗು ಮುಗಿಯುತ್ತಿದ್ದಂತೆ ಬರುವ ವಸಂತಮಾಸ. ಸಸ್ಯ ಸಂಕುಲದಲ್ಲಿ ಚಿಗುರು ಒಡೆದು, ಕೊಂಬೆ ರೆಂಬೆಗಳಲ್ಲಿ ಹಸಿರು ತುಂಬಿ ಹೂ-ಹಣ್ಣು ಬಿಟ್ಟು ಗಿರಿ-ಶಿಖರ, ಬಯಲು-ಗದ್ದೆಗಳಲ್ಲಿ ಜೀವ ಸಂಚಾರವಾಗಿ ಖಗ-ಮೃಗಗಳನ್ನು ಆಕರ್ಷಿಸಿ ಹೊಸ ಬದುಕಿಗೆ ನಾಂದಿ ಹಾಡುತ್ತವೆ. ಕೋಗಿಲೆಯ ಕೂಜನ - ಹೊಂಗೆಯ ತಂಪೆಲರು, ಮಾವು-ಮಲ್ಲಿಗೆಗಳ ಸೌರಭ, ಎಲ್ಲೆಡೆ ಸಂಭ್ರಮ ಸಂತಸದಿಂದ ಪ್ರಕೃತಿ ಮಾತೆ ವರ್ಣಮಯವಾಗಿ ಸಮೃದ್ಧಿಯಿಂದ ಕಂಗೊಳಿಸುತ್ತಾಳೆ.

ಭಾರತದ ವಿವಿಧ ಭಾಗದಲ್ಲಿ ಪ್ರಾದೇಶಿಕ ರೂಢಿ ಪದ್ಧತಿಗನುಗುಣವಾಗಿ ಯುಗಾದಿಯ ಆಚರಣೆಯಲ್ಲಿ ಭಿನ್ನತೆ ಕಂಡುಬಂದರೂ ಸಹ, ಬೇವು ಬೆಲ್ಲದ ಸೇವನೆ ಪಂಚಾಂಗ ಶ್ರವಣ, ಇಷ್ಟದೈವ ಮತ್ತು ಶಕ್ತಿಯ ಪೂಜೆ, ಚಂದ್ರ ದರ್ಶನ ಮಾಡುವ ಕ್ರಮಗಳು ಮಾತ್ರ ಪ್ರಮುಖ ಅಂಶಗಳಾಗಿವೆ. ಯುಗಾದಿಯಂದು ಉಷಃಕಾಲದಲ್ಲಿ ಮಾವು ಬೇವು ಕುದಿಸಿದ ನೀರಲ್ಲಿ ಎಣ್ಣೆಸ್ನಾನ ಮಾಡಿ ಹೊಸ ಬಟ್ಟೆ ಹಾಕಿಕೊಳ್ಳುವರು. ಹಳೆಯ ಕಹಿಗಳನ್ನೆಲ್ಲಾ ಕಳಚಿ ಹೊಸದನ್ನು ಸ್ವೀಕರಿಸುವ ಭಾವ ಈ ಹೊಸ ಬಟ್ಟೆ ಹಾಕುವುದರಲ್ಲಿ ಕಾಣುತ್ತೇವೆ. ಬಾಗಿಲಿಗೆ ತೋರಣ ಕಟ್ಟಿ

ಎಲ್ಲರಿಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು

ಮನೆಯ ಮುಂದೆ ಬಣ್ಣದ ರಂಗೋಲಿ ಬಿಟ್ಟು ಹೂವಿನಿಂದ ಅಲಂಕರಿಸಿ ಹೊಸ ವರ್ಷವನ್ನು ಹರ್ಷದಿಂದ ಸ್ವಾಗತಿಸುತ್ತಾರೆ. ಹಬ್ಬದ ದಿನ ಹೋಳಿಗೆ ಶ್ಯಾವಿಗೆ ಪಾಯಸದ ಸಿಹಿಭಕ್ಷ್ಯಗಳನ್ನು ತಯಾರಿಸಲೇ ಬೇಕು. ಅಂದು ಕುಟುಂಬದವರೆಲ್ಲ ಒಟ್ಟಿಗೆ ಕುಳಿತು ಸಹಭೋಜನ ಮಾಡುವರು.



ಬೇವು ಬೆಲ್ಲವನ್ನು ದೇವರ ಮುಂದಿಟ್ಟು ನಂತರ ಈ ರೀತಿ ಪ್ರಾರ್ಥಿಸುವರು. "ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ ಸರ್ವಾರಿಷ್ಟ ವಿನಾಶಾಯ ನಿಂಬಸ್ಯದಳ ಭಕ್ಷಣಂ" ಅಂದರೆ ಬೇವು-ಬೆಲ್ಲದ ಸೇವನೆಯಿಂದ ಎಲ್ಲಾ ಅರಿಷ್ಟಗಳು ಕಳೆದು ಸಂಪತ್ತು ಆಯುಸ್ಸು ಆರೋಗ್ಯ ಲಭಿಸಲಿ ಎಂದು ಪ್ರಾರ್ಥಿಸಿದ ನಂತರ ಪರಸ್ಪರ ಹಂಚಿಕೊಂಡು ತಿನ್ನುವರು. ನಮ್ಮ ಜೀವನದಲ್ಲಿ ಕಾಣುವ ಹಗಲು-ರಾತ್ರಿಗಳಂತೆ, ಸುಖ-ದುಃಖ, ನೋವು-ನಲಿವುಗಳಂತೆ ಸಿಹಿ-ಕಹಿ ಎರಡನ್ನೂ ಸಮಾನವಾಗಿ ಕಾಣುವ ಸಂಕೇತವೇ ಬೇವು ಬೆಲ್ಲ.

ಪಂಚಾಂಗ ಶ್ರವಣ ಇನ್ನೊಂದು ಮುಖ್ಯ ಆಚರಣೆ. ಚಂದ್ರನ ಕಕ್ಷೆಯಲ್ಲಿ ತಯಾರಾದ ಹೊಸ ಪಂಚಾಂಗವನ್ನು ಮನೆ-ಮನೆಗಳಲ್ಲಿ ಹಾಗೂ ದೇವಾಲಯಗಳಲ್ಲಿ ದೇವರ ಮುಂದಿಟ್ಟು ಪೂಜಿಸಿದ ಬಳಿಕ ಹಿರಿಯರ ಸಮ್ಮುಖದಲ್ಲಿ ಸಾಂಪ್ರದಾಯಿಕವಾಗಿ ಪಠಣ ಮಾಡುವರು. ಆ ವರ್ಷದ ಸಮಗ್ರ ಫಲಗಳನ್ನು ತಿಳಿಯುವರು. ಪಂಚಾಂಗ ಶ್ರವಣ ಮಾಡುವುದೂ ಪುಣ್ಯದ ಕೆಲಸವೆಂದು ನಂಬಿಕೆ ಬೆಳೆದು ಬಂದಿದೆ.

ಇನ್ನು ರೈತರಿಗೆ ಯುಗಾದಿ ದೊಡ್ಡ ಹಬ್ಬ. ಮನೆಗೆ ಸುಣ್ಣ-ಬಣ್ಣ ಬಳಿದು ಬಾಗಿಲಿಗೆ ತಳಿರು ತೋರಣ ಕಟ್ಟಿ, ಮಂಗಳಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಗೋವುಗಳನ್ನು ತೊಳೆದು ಕೊಂಬುಗಳಿಗೆ ಬಣ್ಣ ಹಚ್ಚಿ ಬಣ್ಣದ ಕುಚ್ಚು ಕಟ್ಟಿ ಹೂಮಾಲೆಗಳಿಂದ ಅಲಂಕರಿಸುತ್ತಾರೆ. ಹೆಂಗಳೆಯರು ಗಂಡಸರ ಹಣೆಗೆ ತಿಲಕವನ್ನಿಟ್ಟು ಆರತಿ ಎತ್ತಿ, ಹಬ್ಬದಡಿಗೆಯ ಬುತ್ತಿಯನ್ನು ಕಟ್ಟಿ ಹೊಲಕ್ಕೆ ಕಳುಹಿಸಿ ಕೊಡುತ್ತಾರೆ. ಗೋವುಗಳನ್ನು ಮೆರವಣಿಗೆ ಮಾಡಿಕೊಂಡು ಹೊಲಕ್ಕೆ ಬಂದು ಅಲ್ಲಿ ವ್ಯವಸಾಯದ ಪರಿಕರಗಳನ್ನೆಲ್ಲಾ ಇಟ್ಟು ಭೂಮಿ ಪೂಜೆ ಮಾಡುತ್ತಾರೆ. ನಂತರ ಸಾಂಕೇತಿಕವಾಗಿ ಮೂರು ಸುತ್ತು ಉಳುಮೆ ಮಾಡಿ ಹೊನ್ನಿನಂತಹ ಬೆಳೆ ಬರಲಿ ಎಂದು ಬೇಡಿಕೊಳ್ಳುತ್ತಾರೆ. ಈ ಆಚರಣೆಗೆ "ಹೊನ್ನೇರು" ಎಂದು ಕರೆಯುತ್ತಾರೆ. ಆ ದಿನ ಊರಿನಲ್ಲಿ ಎತ್ತುಗಳು ಹಾಗೂ ಗಾಡಿ ಓಟದ ಸ್ಪರ್ಧೆ ಏರ್ಪಡಿಸಿ ಆನಂದಿಸುತ್ತಾರೆ.



ಹೊತ್ತು ಮುಳುಗಿದ ಮೇಲೆ ರಾತ್ರಿ ಚಂದ್ರನ ದರ್ಶನ ಮಾಡುತ್ತಾರೆ. ನಂತರ ದೇವರಿಗೆ ಮತ್ತು ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಈ ದಿನ ಇಷ್ಟ ದೈವ ಮತ್ತು ಶಕ್ತಿ ಪೂಜೆಗಳನ್ನು ಮಾಡುವುದರಿಂದ ಯಶಸ್ಸು ಸಿಗುವುದೆಂಬ ನಂಬಿಕೆ ಬೆಳೆದು ಬಂದಿದೆ. ಆದ್ದರಿಂದಲೇ ಯಾವುದೇ ಹೊಸ ಯೋಜನೆಗಳ ಕಾರ್ಯಾರಂಭಕ್ಕೆ ಯುಗಾದಿ ದಿನವನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಹೀಗೆ ಮಾನವನ ಜೀವನ ಮಾರ್ಗಕ್ಕೆ ಪೂರಕವಾದ, ಸ್ಫೂರ್ತಿದಾಯಕವೂ, ಆದರ್ಶಪೂರ್ಣವೂ ಆದ ಹಬ್ಬಗಳು ಮತ್ತು ಧಾರ್ಮಿಕ ಆಚರಣೆಗಳನ್ನು ಅನಾದಿಕಾಲದಿಂದಲೂ ನಡೆಸಿಕೊಂಡು ಬರಲಾಗುತ್ತಿದೆ.

(L.T. Kalyani)
- ಎಲ್. ಟಿ. ಕಲ್ಯಾಣಿ.

ಟೀಕೆ - ಟಿಪ್ಪಣಿ

*ವೇದ ಸುಳ್ಳಾದರೂ ಗಾದೆ ಸುಳ್ಳಾಗದು*

ಮುಖಪುಟ

## ಅಧ್ಯಕ್ಷರ ಸಂದೇಶ

- ರಾಜಶ್ರೀ ರಮೇಶ್



**ಮ**ಲ್ಲಿಗೆ ಸಂಘದ ನನ್ನ ಬಂಧು ಮಿತ್ರರೆ,

ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. ಖರನಾಮ ಸಂವತ್ಸರ ಎಲ್ಲರಿಗು ಒಳ್ಳೆ ಆರೋಗ್ಯ, ಯಶಸ್ಸು ತರಲಿ ಎಂದು ಆಶಿಸುತ್ತೀನಿ. ಈ ಹಬ್ಬದ ದಿನ ಎಲ್ಲರ ಮನೆಗಳಲ್ಲೂ ಬೇವು-ಬೆಲ್ಲ ಮಿಶ್ರಣ ಮಾಡಿ ಬಂಧು ಮಿತ್ರರಿಗೆ ಹಂಚಿ, ಸೇವಿಸುವುದು ಸಾಮಾನ್ಯ. ಬೇವಿನ ಕಹಿ, ಬೆಲ್ಲದ ಸಿಹಿ, ಮಾನವ ಜೀವನದಲ್ಲಿ ಸುಖ -ದುಃಖ ಎರಡೂ ಇರುವುದು ಅನ್ನೋದನ್ನು ನಿರೂಪಿಸುತ್ತದೆ. ಮಲ್ಲಿಗೆ ಸಂಘದ ಪರವಾಗಿ ನಿಮಗೆಲ್ಲ ಮಿಶ್ರಣದಲ್ಲಿ ಹೆಚ್ಚು ಬೆಲ್ಲವೇ ಸಿಕ್ಕಿ, ಈ ಹೊಸ ವರುಷ ಸುಖ ತರಲಿ ಎಂದು ಮತ್ತೊಮ್ಮೆ ಆಶಿಸುತ್ತೀವಿ.

ಜನಪ್ರಿಯ ಕನ್ನಡ ಚಿತ್ರಗೀತೆ "ಕಾಲವನ್ನು ತಡೆಯೋರು ಯಾರು ಇಲ್ಲ...." ಲಿ ಇರೋಹಾಗೆ ತೀವ್ರ ಚಳಿಗಾಲ ಮುಗಿದು ಆಗಲೇ ವಸಂತ ಋತು ಶುರು. ಇದು ಕಂಪು ಈ-ಪತ್ರಿಕೆಯ ಮೂರನೇ ಸಂಚಿಕೆ. ನೀವೆಲ್ಲ ಇದನ್ನು ಓದಿ ಆನಂದಿಸಿರುವಿರೆಂದು ಭಾವಿಸುತ್ತೀನಿ. ಇದು ನಿಮ್ಮೆಲ್ಲರಿಗೂ ಎಷ್ಟರ ಮಟ್ಟಿಗೆ ಇಷ್ಟ ಆಗಿದೆ ಅಂತ ತಿಳಿದುಕೊಳ್ಳಲು ನಮಗೂ ಕುತೂಹಲ. ಯಾವುದೇ ಹೊಸ ಯೋಜನೆ ಸಫಲವಾಗಲು ಸಕಾರಾತ್ಮಕ ಹಾಗು ನಕಾರಾತ್ಮಕ ಅನಿಸಿಕೆಗಳು ಮತ್ತು ವಿಮರ್ಶನೆ ಅತ್ಯವಶ್ಯಕ. ಆದ್ದರಿಂದ ದಯವಿಟ್ಟು, ನಿಮ್ಮ ಅನಿಸಿಕೆಗಳನ್ನು ನಮಗೆ ತಿಳಿಸಬೇಕೆಂದು ವಿನಂತಿ.

ಕರ್ನಾಟಕದಲ್ಲಿ ಹುಟ್ಟಿ ಬೆಳೆದಿರುವ ಕನ್ನಡಿಗರು ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಕವನ ಕೇಳಿರುವುದು ಸತ್ಯ.
ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ
ಅದೇ ರೀತಿ ಮಲ್ಲಿಗೆ ಸಂಘದ ಸದಸ್ಯರಿಗೆ ಕೂಡ, ಈ ಹೊಸ ವರುಷ ಹೊಸತನ್ನು ತರುವ ಸಲುವಾಗಿ, ಕಾರ್ಯಕಾರಿ ಸಮಿತಿ ಸದಸ್ಯರು ನಿರತರಾಗಿದ್ದೀವಿ.
ಏಪ್ರಿಲ್ 4 ಮನೆ ಮಂದಿಯೊಡನೆ ಹಬ್ಬ ಆಚರಿಸಿ, ನಿಮ್ಮ ಮಲ್ಲಿಗೆ ಬಂಧು ಮಿತ್ರರೊಡನೆ ಹೊಸ ವರ್ಷದ ಆರಂಭ ಮಾಡಲು ಏಪ್ರಿಲ್ 30 ರಂದು, ನಿಮ್ಮವರೆಲ್ಲರ ಜೊತೆ ಬರಬೇಕೆಂದು, ನನ್ನ ಸಮಿತಿ ಸದಸ್ಯರ ಪರವಾಗಿ ಆಹ್ವಾನಿಸುತ್ತೀನಿ. ಮಲ್ಲಿಗೆ ಸಂಘದ ಪುಟಾಣಿಗಳು, ಪ್ರಾಯದವರು, ಪ್ರಬುದ್ಧರು ಮನೋರಂಜನ ಕಾರ್ಯಕ್ರಮಗಳನ್ನು ನಿಮಗೆ ತರಲು ಸತತವಾಗಿ ಅಭ್ಯಾಸ ನಡೆಸುತ್ತಿರುವರು. ನಮ್ಮ ತಾಯಿನಾಡಿನ ಹಬ್ಬ ಆಚರಿಸುವಾಗ ಅಲ್ಲಿನ ಕಲಾವಿದರ ಗಾನ ಕೇಳುವುದು ಇನ್ನೊಂದು ಭಾಗ್ಯ, ಅಲ್ಲವೇ? ಅಂಥಹ ಸೌಭಾಗ್ಯ ನಿಮಗೆ ತರಲು, ಒಳ್ಳೆ ಅವಕಾಶ ಸಿಕ್ಕಿದೆ. ಕರ್ನಾಟಕ ಸಂಗೀತ ಪ್ರಪಂಚದ ಯಶಸ್ವಿ ಗಾಯಕರಲ್ಲಿ ಒಬ್ಬರಾದ ಡಾ||ಟಿ.ಎಸ್. ಸತ್ಯವತಿ ಅವರ ಸುಮನೋಹರ ಗಾಯನ ಕಚೇರಿ ಏರ್ಪಡಿಸುವ ಅವಕಾಶ ನಮಗೆ ಸಿಕ್ಕಿದೆ ಎಂದು ಹೇಳಲು ತುಂಬಾ ಸಂತೋಷ ಪಡುತ್ತೀನಿ. ಈ ಕಾರ್ಯಕ್ರಮದ ಎಲ್ಲ ವಿವರ ಇನ್ನು ಸದ್ಯದಲ್ಲೇ ನಿಮಗೆ ತಲುಪುವುದು. ಮನೋರಂಜನೆ ಕಾರ್ಯಕ್ರಮಗಳು, ಶಾಸ್ತ್ರೀಯ ಸಂಗೀತ, ಸ್ನೇಹಿತರೊಡನೆ ಹರಟೆ ಅವಕಾಶ ಮತ್ತು ಒಳ್ಳೆ ಊಟದ ತಯಾರಿ ನಡೆದಿದೆ. ನೀವು, ನಿಮ್ಮವರೆಲ್ಲ ಬನ್ನಿ, ನಮ್ಮೆಲ್ಲರೊಡನೆ ಆಚರಿಸಲು ಯುಗಾದಿ 2011.

ಇಂತಿ ನಿಮ್ಮ ವಿಶ್ವಾಸಿ,
ರಾಜಶ್ರಿ ರಮೇಶ್

**MKANT YUGADI—APRIL 30, 2011**

MKANT invites you, your family and friends to join us in celebrating Yugadi.

Time:
3:30-4:15PM Meet and Greet
4:15-7:30PM Cultural Programs
8:00PM Dinner

Venue: Wakeland High School
10700 Legacy Rd
Frisco, TX 75034

Visit www.mallige.org for more details.

HIGHLIGHT of the event will be Carnatic Classical music concert by:
**Vid. Dr. T. S. Sathyavathi (Vocal)**
**Sri T. S. Krishna Murthy (Violin)**
**Sri Anoor Anantha Krishna Sharma (Mridanga)**
Please Click here for more details about the artists.

ಕೈ ಕೆಸರಾದರೆ ಬಾಯಿ ಮೊಸರು

ಮುಖಪುಟ

## ಕನ್ನಡತನವನ್ನು ಕಾಪಾಡಿಕೊಂಡು ಬರುವುದು ಹೇಗೆ?

- ಸಂಧ್ಯಾ ಹೊನ್ನವಳ್ಳಿ



**ಸ**ಪ್ತ ಸಮುದ್ರಗಳಾಚೆಗಿನ ಭವ್ಯವಾದ ದೇಶ, "ಲ್ಯಾಂಡ್ ಆಫ಼್ ಆಪರ್ಚುನಿಟೀಸ್" ಅಮೇರಿಕಾ. ಇಲ್ಲಿ ವಾಸಿಸುತ್ತಿರುವ ಅನೇಕ ಭಾರತೀಯರಿಗೆ ಈಗ ಇದೇ "ಹೋಮ್ ಅವೇ ಫ಼್ರಮ್ ಹೋಮ್". ಹೆಚ್ಚಿಗೆ ಓದಲು ಬಂದವರು, ಡಾಲರ್ ಸಂಪಾದಿಸಲು ಬಂದವರು, ಮದುವೆಯಾಗಿ - ಹೆತ್ತವರು, ನಮ್ಮ ತಮ್ಮವರು, ಎಲ್ಲರನ್ನೂ ತೊರೆದು ಗಂಡನ ಹಿಂದೆ ಬಂದವರು, ಇಲ್ಲಿಯವರನ್ನೇ ಮದುವೆಯಾಗಲು ಬಂದವರು - ಹೀಗೇ ನಾನಾ ಕಾರಣಗಳಿಂದ ಬಂದು ಎಲ್ಲರೂ ಜೀವನ ನಡೆಸುತ್ತಿದ್ದಾರೆ. ಇಂಥಾ ದೇಶದಲ್ಲಿನ ಒಂದು ಚಿಕ್ಕ ಊರು. ಅಲ್ಲಿನ ಒಬ್ಬ ಭಾರತೀಯರ ಮನೆಯಲ್ಲಿ ಒಂದು ಪಾರ್ಟಿ. ಆಗ ಕಾಣಿಸಿದ ಒಂದು ಹೊಸ ಮುಖ. ಹೋಗಿ ಪರಿಚಯ ಮಾಡಿಕೊಳ್ಳುವ ಆಸೆ. ಮಾತಾಡಿಸಿದ್ರೆ ಗೊತ್ತಾಯ್ತು, ಅವರೂ ಬೆಂಗಳೂರ್ನವರೆ ಅಂತ.... ಆಹಹಹಾ, ಮನಸ್ಸಿನಲ್ಲಿ ಎಲ್ಲಿಲ್ಲದ ಖುಶಿ, ಆತ್ಮೀಯತೆ!! ಸದ್ಯ, ರಾಗಿ ಗುಡ್ಡ, ಸುಬ್ಬಮ್ಮನ ಅಂಗಡಿ, ದರ್ಶಿನಿ ಕಾಫಿ ಇವೆಲ್ಲಾ ಗೊತ್ತಿರೋ ಇನ್ನೊಬ್ಬರು ಸಿಕ್ಕಿದ್ರಲ್ಲ ಅನ್ನೋ ಸಂಭ್ರಮ ! ಆದಷ್ಟು ಬೇಗ ಅವರನ್ನ ಮನೆಗೆ ಕರೆದು, ಕೂಡಿಸಿ, ಮಾತಾಡಿ, ಊಟ ಮಾಡಬೇಕೆಂಬ ತವಕ..... ಹೇಗಿದ್ರೂ ಯುಗಾದಿ ಹಬ್ಬ ಬರ್ತಾ ಇದೆ, ಒಳ್ಳೇ ಅವಕಾಶ !

ಈ ಸಂದರ್ಭ ಬಹುಶಃ ಅಮೇರಿಕಾದ ಚಿಕಾಗೊ, ನ್ಯೂ ಯಾರ್ಕ್, ನ್ಯೂ ಜೆರ್ಸೀ, ಡಾಲಸ್ ಇಂಥಹ ದೊಡ್ಡ ದೊಡ್ಡ ಊರುಗಳಿಗೆ ಅನ್ವಯಿಸುದಿಲ್ಲವೇನೋ. ಯಾಕೆಂದ್ರೆ ಅಲ್ಲಿ ಬೇಕಾದಷ್ಟು ಭಾರತೀಯರೂ, ಕನ್ನಡಿಗರೂ ಇರುತ್ತಾರೆ.ಇಲ್ಲದಿದ್ದರೆ ಇಂತಹ ಬೃಹತ್ ಕನ್ನಡ ಸಂಘಗಳಿರುತ್ತವೆಯೇ? ಅಥವಾ ಕನ್ನಡವನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳು ನಡೆಯುತ್ತವೆಯೇ ? ಅಕ್ಕ ಪಕ್ಕದ ಅಪಾರ್ಟ್‌ಮೆಂಟ್‌ಗಳಲ್ಲಿ, ಮನೆಗಳಲ್ಲಿ ಕನ್ನಡಿಗರಿರುತ್ತಾರೆ, ಹಬ್ಬ ಹರಿದಿನಗಳನ್ನು ಆಚರಿಸಲು ದೇವಸ್ಥಾನಗಳಿರುತ್ತವೆ, ಕನ್ನಡಿಗರ ಮನೆ ಮದುವೆ, ಮುಂಜಿ, ಗೃಹಪ್ರವೇಶ, ನಾಮಕರಣಗಳನ್ನು ಸಾಂಗೋಪಾಂಗವಾಗಿ ನಡೆಸಿಕೊಡಲು ಝುಮ್ ಅಂತ ಕಾರಿನಲ್ಲಿ ಬರೋ ಪುರೋಹಿತರಿರುತ್ತಾರೆ. ಇನ್ನು ಅವ್ರಿವರ ಮನೆಗಳಲ್ಲಿ ನಡೆಯೋ ಸತ್ಯನಾರಾಯಣ ಪೂಜೆಗಳಿಗಂತೂ ಲೆಖ್ಖವೇ ಇಲ್ಲ! ದೈನಂದಿನ ಬಳಕೆಗೆ ಬೇಕಾಗುವ ಪದಾರ್ಥಗಳಿಂದ ಹಿಡಿದು ವಿಶಿಷ್ಟ ಸಮಾರಂಭಗಳಿಗೆ ಬೇಕಾಗುವ ಎಲ್ಲವೂ ದೊರೆಯುವ ಅಂಗಡಿಗಳಿರುತ್ತವೆ. ನಿಮ್ಮನೆ ಪಾರ್ಟಿಗೆ ಚಪಾತಿಗಳು ಬೇಕೇ? ಪೂರಿಗಳು ಬೇಕೇ? ಒಬ್ಬಟ್ಟು ಬೇಕೇ? ಒಂದು ಫೋನ್ ಮಾಡಿ ಹೇಳಿದ್ರೆ ಸಾಕು, ದುಡ್ಡು ಇಸ್ಕೊಂಡು ಟೈಮಿಗೆ ಸರಿಯಾಗಿ ನಮಗೆ ಬೇಕಾದ್ದನ್ನು ತಯಾರಿಸಿ ಕೊಡುವ ಜನರಿರುತ್ತಾರೆ!

ಆದ್ರೆ, ಈ ದೇಶದಲ್ಲಿ ಈ ಯಾವ ಸುಖ ಸೌಕರ್ಯಗಳೂ ಇರದ, ಎಷ್ಟೋ ಕಂಡೂ ಕೇಳದ ಚಿಕ್ಕ ಪುಟ್ಟ ಊರುಗಳಲ್ಲಿರೋ ಒಬ್ಬಿಬ್ಬ ಕನ್ನಡಿಗರ ಕಥೆ ಏನು? ಯೋಚಿಸಿದ್ದೀರಾ? ಚಿಕ್ಕ ಊರುಗಳಲ್ಲಿ ಸಹಜವಾಗಿ ಅವಕಾಶಗಳು ಕಡಿಮೆ, ಆದ್ದರಿಂದ ಅಲ್ಲಿ ಬಂದು ನೆಲೆಸುವ ಭಾರತೀಯರೂ ಕಡಿಮೆ, ಹಾಗೇ ಕನ್ನಡದವರೂ ಬಹಳ ಕಡಿಮೆಯೇ ಇರುತ್ತಾರೆ. ಭಾರತದ ಎಲ್ಲಾ ರಾಜ್ಯಗಳಿಂದಲೂ ಒಂದೊಂದು ಪರಿವಾರ ಇದ್ದರೆ ಹೆಚ್ಚು. ಯಾವ ಒಕ್ಕೂಟಕ್ಕಾಗಲೀ, ಭಾರತೀಯ ಪಾರ್ಟಿಗಾಗಲಿ ಹೋದರೆ, ಆಂಗ್ಲ ಭಾಷೆಯಲ್ಲೇ ಮಾತಾಡಬೇಕು ಯಾಕೆಂದ್ರೆ ಅಲ್ಲಿ ಎಲ್ಲರಿಗೂ ಬರುವುದು ಅದೊಂದೇ ಭಾಷೆ !! ನಾಗರಪಂಚಮಿ, ವರಮಹಾಲಕ್ಷ್ಮಿ ವ್ರತ ಎಲ್ಲಾ ನಮ್ಮನ್ನ ಬಿಟ್ಟು ಬೇರೊಬ್ಬರಿಗೆ ಗೊತ್ತಿರೋದಿಲ್ಲ. ರಾಗಿ ಮುದ್ದೆಯ ರುಚಿ, ಬಿಸಿ ಬೇಳೇ ಭಾತ್, ಗಸ ಗಸೆ ಪಾಯಸದ ಗಮ್ಮತ್ತು ತಿಳಿದಿರುವ ಕನ್ನಡದ ಜನ ಇನ್ನೊಬ್ಬರಿರೋದಿಲ್ಲ. ಹೋಗ್ಲಿ, ಕನ್ನಡದ ಅಡಿಗೆ ರುಚಿ ಸ್ವಲ್ಪ ತೋರಿಸೋಣ ಅಂತ, ಹುಮ್ಮಸ್ಸಿನಿಂದ ಕೆಲವು ಭಾರತೀಯ ಮಿತ್ರರನ್ನ ಕರೆದು, ಅಚ್ಚುಕಟ್ಟಾಗಿ ನುಚ್ಚಿನುಂಡೆ ಮಜ್ಜಿಗೆಹುಳಿ ಬಾಳಕ ಉಪ್ಪು ಮೆಣಸಿನಕಾಯಿ ಮಾಡಿ ಬಡಿಸಿದರೇ......... "ವಾಟ್ ಇಸ್ ದಿಸ್ ದಿಶ್?", "ಹವ್ ಡು ಯು ಮೇಕ್ ಇಟ್?", "ಹವ್ ಡು ವಿ ಈಟ್ ಇಟ್?" ಎಂಬ ಪ್ರಶ್ನೆಗಳು!! ಸರಿ, ವಿವರವಾಗಿ ಕಥೆ ಎಲ್ಲ ಹೇಳಿದ ಮೇಲಾದ್ರೂ ತಿನ್ತಾರ? ಊಹೂ...."ಇಟ್ ಇಸ್ ವೆರಿ ಸ್ಪೈಸಿ" ಅನ್ತ ಎಲ್ಲದರ ಮೇಲೂ ಮೊಸರು ಸುರಿದುಕೊಂಡು ಅಂತೂ ಇಂತೂ ತಿಂದು ಮುಗಿಸೋ ಜನ ! ಅದೇ ಇನ್ನೊಬ್ಬ ಕನ್ನಡದವರಾಗಿದ್ದರೆ ಈ ತಾಪತ್ರಯವಿರುತ್ತಿತ್ತೇ? ಸುಮ್ಮನೆ ಪಟ್ಟ ಶ್ರಮವೆಲ್ಲಾ ವ್ಯರ್ಥವಾಯಿತು ಅನ್ನಿಸುತ್ತೆ.

ಕನ್ನಡ ಹಬ್ಬಗಳ ಸಂಭ್ರಮ ಹಂಚಿಕೊಳ್ಳುವುದಕ್ಕಾಗಲೀ, ಎಸ್.ಪೀ.ಬೀ ಹಾಡುಗಳು, ಡಾ.ರಾಜ್ ಸಿನಿಮಾಗಳು, ಮಾ. ಹಿರಣ್ಣಯ್ಯ ನಾಟಕಗಳು, ಇವೆಲ್ಲವನ್ನೂ ಚರ್ಚಿಸುವುದಿಕ್ಕಾಗಲೀ ಸಹಕನ್ನಡಿಗರು ಇರದಿದ್ದಾಗ ಮನಸಿಗೆ ತುಂಬಾ ವ್ಯಥೆಯಾಗುತ್ತದೆ. ಮನೆ ಅಡಿಗೇನೇ ತಿಂದೂ ತಿಂದೂ ಬೇಜಾರಾಯಿತಪ್ಪಾ ಅಂದ್ರೆ, ಹೊರಗಡೆ "ಉಡುಪಿ ಗಾರ್ಡನ್" ಬದಲು "ಆಲಿವ್ ಗಾರ್ಡನ್", "ದೋಸೆ ಕ್ಯಾಂಪ್" ಬದಲು "ಟಾರ್ಟಿಲಾ ಕ್ಯಾಂಪ್"! ಹೇಗಿದೆ ಇದು?

ಹೀಗಿರುವಲ್ಲಿ, ಇಂಥಾ ಚಿಕ್ಕ ಊರುಗಳಲ್ಲಿ ನಾವು ನಮ್ಮ ಮಕ್ಕಳಿಗೆ ನಮ್ಮ ನಾಡು, ಭಾಷೆ, ಜನರ ಬಗ್ಗೆ ತಿಳುವಳಿಕೆ, ಉತ್ಸಾಹ ಹುಟ್ಟಿಸುವುದಾದರೂ ಹೇಗೆ? ಅವರಲ್ಲಿ ಕನ್ನಡದ ಬಗ್ಗೆ ಅಭಿಮಾನ ಬೆಳೆಸುವುದಾದರೂ ಹೇಗೆ? ನಮ್ಮ ದಿನ ನಿತ್ಯದ, ಸಮಯವೇ ಸಾಲದ, "ಗಡಿಬಿಡೀ" ಜೀವನದಲ್ಲಿ, ಇದು ಕಷ್ಟದ ಕೆಲಸವಾದರೂ, ಅಸಾಧ್ಯದ ಕೆಲಸವೇನೂ ಅಲ್ಲ. ಮನೇಲಿ ಕನ್ನಡವನ್ನೇ ಮಾತಾಡೋದು, ಕನ್ನಡ ಓದಲು ಬರೆಯಲು ಮಕ್ಕಳಿಗೆ ಹೇಳಿಕೊಡುವುದು, ಕನ್ನಡ ಹಾಡುಗಳು, ಶಾಸ್ತ್ರೀಯ ಸಂಗೀತವನ್ನು ಕಲಿಸುವುದು, ನಮ್ಮ ಕನ್ನಡದ ಅಡಿಗೆ ತಿಂಡಿಗಳನ್ನೆ ಮಾಡುವುದು, ಮತ್ತೆ ಎಲ್ಲಕ್ಕೂ ಮಿಗಿಲಾಗಿ ನಮ್ಮ ಕನ್ನಡದ ಹಬ್ಬ ಹುಣ್ಣಿಮೆಗಳನ್ನ ಬಿಡದೆ ನಮ್ಮ ಮನೆ ಮಟ್ಟಿಗಾದರೂ ನಾವು ಆಚರಿಸುವುದು. ಕಿತ್ತೂರು ಚೆನ್ನಮ್ಮ, ಒನಕೆ ಓಬವ್ವ, ಮೈಸೂರು ದಸರಾ ಮುಂತಾದ ಕಥೆಗಳ ಮೂಲಕ ನಮ್ಮ ಮಕ್ಕಳಿಗೆ ಕನ್ನಡ ನಾಡಿನ ಮಹತ್ವವನ್ನು ವಿವರಿಸಿ ಹೇಳುವುದು. ಹೀಗೆ ಮಾಡುವುದರಿಂದ ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಕನ್ನಡ ನಾಡು, ಕನ್ನಡ ಭಾಷೆ, ಕನ್ನಡ ಜನರ ಬಗ್ಗೆ ಕುತೂಹಲ, ಅಭಿಮಾನ, ಹೆಚ್ಚಿಗೆ ತಿಳಿಯುವ ಆಸೆ ಎಲ್ಲಾ ಬೆಳೆಯುತ್ತದೆ. ಚಿಕ್ಕ ವಯಸ್ಸಿನಲ್ಲಿ ಕಲಿತ ವಿದ್ಯೆ ಎಂದಿಗೂ ಮರೆಯೋದಿಲ್ಲ ಅಂತಾರೆ ಅಲ್ವಾ? ಭಾಷೇನೂ ಹಾಗೇ......

ಹೀಗೆ ಅಮೇರಿಕಾದ ದೊಡ್ಡ ದೊಡ್ಡ ಊರುಗಳಲ್ಲಿ ಕನ್ನಡ ಸಂಘಗಳು ಮಾಡುತಿರುವ ಈ ಸತ್ಕಾರ್ಯವನ್ನು, ಚಿಕ್ಕ ಚಿಕ್ಕ ಊರುಗಳಲ್ಲಿ ಕನ್ನಡ ಮಾತಾಡೋ ಕೇವಲ ಒಬ್ಬಿಬ್ಬ ತಂದೆ ತಾಯಿಯರು ಮಾಡಬೇಕಾಗುತ್ತದೆ. ಈ ಎಲ್ಲ ಶ್ರಮ ಪ್ರಯತ್ನಗಳು ಸಾರ್ಥಕವಾಗೋದು ಯಾವಾಗ ಗೊತ್ತೆ? ಅಮೇರಿಕಾದಲ್ಲಿರೋ ತಮ್ಮ ಮೊಮ್ಮಕಳು, ಮುದ್ದು ಮುದ್ದಾಗಿ ಕನ್ನಡ ಮಾತಾಡುವುದನ್ನು ಕೇಳುತ್ತಾ ಖುಶಿ ಪಡುವ ಅಜ್ಜಿ-ತಾತಂದಿರ ಮುಖದ ಮೇಲೆ ಹೆಮ್ಮೆ, ಸಂತೋಷಗಳು ಕಾಣಿಸಿದಾಗ! ಆಗಲೇ ನಮಗೆ ನಮ್ಮ ಕನ್ನಡದ ಮೌಲ್ಯ ತಿಳಿಯುವುದು !

ಟೀಕೆ - ಟಿಪ್ಪಣಿ

*ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ*

**ಝೋ-ಝೋ ಕತೆ**

(ಝೋ-ಝೋ ಕತೆ ಇತ್ತೀಚೆಗೆ ಜನಪ್ರಿಯವಾಗಿರುವ ಕತೆ ಕಟ್ಟುವ ಆಟ. ಒಂದೇ ಕತೆಯನ್ನು ಹಲವರು ಬರೆಯುವುದು. ಸಂಚಿಕೆಯಿಂದ ಸಂಚಿಕೆಗೆ ಕತೆ, ವಿವಿಧ ಕತೆಗಾರರ ಕಲ್ಪನೆಯ ಕುಸುರಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಸಮಕಾಲೀನ ಸಮಸ್ಯೆಯೊಂದರ ಹಲವು ಮಗ್ಗುಲುಗಳನ್ನು ಸರಳವಾಗಿ, ವಿಭಿನ್ನ ದೃಷ್ಟಿಕೋನಗಳಲ್ಲಿ ವಿವರಿಸುವುದು ಈ ಕತೆಯ ಉದ್ದೇಶ. ಝೋ-ಝೋ ಕತೆಯಲ್ಲಿ ನಿಮ್ಮೆಲ್ಲರ ಒಳನೋಟಗಳಿಗೆ ಅವಕಾಶ ಉಂಟು, ಬನ್ನಿ, ನೀವೂ ನಿಮಗನ್ನಿಸಿದ್ದನ್ನು ಬರೆಯಿರಿ.)

## ಎನ್ನ ನೀತಿಯ ಕುರುಡು



ಭಾಗ 2 – ಶ್ರೀಮತಿ ಉಮಾ ಗಿರಿಧರ್

ಬಾಗಿಲಿಗೆ ಎದುರಾಗಿ ಬಂದ ನೀತಿ 'ಅಮ್ಮಾ...' ಎಂದು ತಬ್ಬಿ ಮುತ್ತಿಟ್ಟಾಗ ಇಷ್ಟು ಹೊತ್ತು ಅವಳ ಬಗ್ಗೆ ತಪ್ಪಾಗಿ ಯೋಚಿಸಿ ತಲೆ ಕೆಡಿಸಿಕೊಂಡ ಬಗ್ಗೆ ನನಗೇ ನಾಚಿಕೆ ಎನಿಸಿತು.ಮನೆ ಒಳಗೆ ಬಂದು ನೋಡಿದಾಗ, ಅಚ್ಚುಕಟ್ಟಾಗಿ ಜೋಡಿಸಿಟ್ಟ ಊಟದ ಟೇಬಲ್ ನೋಡಿ ಮತ್ತೂ ಆಶ್ಚರ್ಯವಾಯಿತು.

ನಿಂಬೆ ಚಿತ್ರಾನ್ನ, ಶಾವಿಗೆ ಪಾಯಸ, ಕೋಸಂಬರಿ(ಸಾಲಾಡ್), ಪಾಸ್ತ, ಕೇಕ್ - ಪಾಶ್ಚಾತ್ಯ ಹಾಗೂ ಸ್ವದೇಶದ ಸಮ್ಮಿಳನದ ಅಡುಗೆಯನ್ನು ನೋಡಿ ನಾಚಿ ಮೂಗಿನ ಮೇಲೆ ಬೆರಳಿಡುವಂತಾಯಿತು. ನನ್ನ ಮನಸಿನ ಗೊಂದಲದಲ್ಲಿ ನನ್ನ ಹುಟ್ಟುಹಬ್ಬವನ್ನೇ ಮರೆತಿದ್ದ ನನಗೆ, ಅದನ್ನು ನನ್ನ ಮಗಳು ನೆನಪಿಸಿದ ರೀತಿ ನೋಡಿ ಕಣ್ಣಲ್ಲಿ ಆನಂದಬಾಷ್ಪವುಂಟಾಯಿತು. 'ಗೂಗಲ್'ನಲ್ಲಿ ಅಡುಗೆ ತಯಾರಿಸುವ ವಿಧಾನವನ್ನು ನೋಡಿ ಅತ್ಯಾಸಕ್ತಿಯಿಂದ ತಯಾರಿಸಿ ನನ್ನನ್ನು ಸಂತೋಷಪಡಿಸಿದ ರೀತಿ ನಿಜಕ್ಕೂ ಮೆಚ್ಚುವಂತದ್ದು. ತಂದೆ-ತಾಯಿ ಮಕ್ಕಳಿಗೆ ಕೊಟ್ಟ ಸ್ವಾತಂತ್ರ್ಯದ ದುರುಪಯೋಗ, ಸ್ವೇಚ್ಚೆ ಎಂದು ತಪ್ಪು ಭಾವಿಸಿದ ನನಗೇ ಬೇಸರವಾಯಿತು.

ಮಕ್ಕಳು ಬೆಳೆಯುವ ವಾತಾವರಣ, ಪರಿಸರ ಬಹುಮುಖ್ಯ. "Be a Roman when you are in Rome" ಎಂಬ ನಾಣ್ಣುಡಿ ನೆನಪಾಯಿತು. ಹುಟ್ಟಿದಾಗಿನಿಂದ ಅಮೆರಿಕದಲ್ಲೇ ಬೆಳೆದು ಇಲ್ಲಿಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವುದರ ಜೊತೆಗೆ, ತಂದೆ-ತಾಯಿಯ ಮನಸ್ಸಿಗೂ ಮುದಕೊಡುವುದರ ಬಗ್ಗೆ ಮಕ್ಕಳಲ್ಲಿ ರಕ್ತಗತವಾಗಿ ಭಾರತೀಯ ಸಂಪ್ರದಾಯ, ಸಂಸ್ಕೃತಿ ಇನ್ನೂ ಉಳಿದಿದೆ. ಅವರ ಸಂತೋಷವೇ ನಮ್ಮ ಸಂತೋಷ! ಅವರಿಗಾಗಿ ನಾವು ಸ್ವಲ್ಪವಾದರೂ ಬದಲಾದರೆ ಮನಸ್ಸಿಗೆ ಯಾವ ಗೊಂದಲ ತಳಮಳವೂ ಇರುವುದಿಲ್ಲ ಎಂದು ಯೋಚಿಸಿ, ನನ್ನ ಮಗಳನ್ನು ತಬ್ಬಿ 'I love You..!' ಚಿನ್ನ ಎಂದು ಮುದ್ದಿಸಿದೆ.

ಈ ಸಂತೋಷದ ಮಧ್ಯೆ ಎಲ್ಲೋ ಮನಸ್ಸಿನಾಳದಲ್ಲಿ ಶ್ರೀಕರನ ಫೋನ್‌ಗಾಗಿ ಹಂಬಲಿಸುತ್ತಿದ್ದೆ. ಅಷ್ಟರಲ್ಲೆ ಡೋರ್ ಬೆಲ್ ಸದ್ದಾಯಿತು. ಬಾಗಿಲು ತೆರೆದರೆ, ಹೂಗುಚ್ಛದೊಂದಿಗೆ ನಗುತ್ತಾ ನಿಂತಿದ್ದ ಶ್ರೀಕರ್ ಕಂಡರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ!

(ಮುಂದುವರಿಯುವುದು)

ಟೀಕೆ - ಟಿಪ್ಪಣಿ

*ರತ್ನ ತಗೊಂಡು ಗಾಜಿನ ತುಂಡಿಗೆ ಹೋಲಿಸಿದ ಹಾಗೆ*

# Teenage ಯುಗಾದಿ ಸಂಭ್ರಮ

- ಸುಧಾ ಶ್ರೀನಾಥ್



"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ"

'ಅರಳು ಮಲ್ಲಿಗೆ' ಕನ್ನಡ ಶಾಲೆಯ ಮಕ್ಕಳು, ಬೇವು ಬೆಲ್ಲ ತಿಂದು ಯುಗಾದಿಯ ಹಾಡು ಸ್ವಚ್ಛವಾಗಿ ಹಾಡುತ್ತಿದ್ದುದು ಕೇಳಿ teacher ಮುಖದಲ್ಲಿ ಕಾಣುತ್ತಿತ್ತು ತೃಪ್ತಿಯ ಧನ್ಯತಾಭಾವ. ಅಲ್ಲಿದ್ದ ತಂದೆತಾಯಿಯರೂ ಸಹ ಮಕ್ಕಳ ಜೊತೆ ಹಾಡನ್ನು ಗುನುಗುತ್ತಾ ತಲೆತೂಗುವುದರಲ್ಲಿಯೇ ಗೊತ್ತಾಗುತ್ತಿತ್ತು ಅವರಿಗೂ ತುಂಬಾ ಖುಷಿಯಾಗಿದೆಯೆಂಬುದು. ಕರ್ನಾಟಕದಿಂದ ಸಾವಿರಾರುಮೈಲಿ ದೂರದಲ್ಲಿ ತಾವು ನೆಲೆಸಿದ್ದರೂ ಮಕ್ಕಳ ಬಾಯಲ್ಲಿ ಈ ಹಾಡು ಕೇಳಿದ್ದರಿಂದ ಅವರ ಕಣ್ಣಲ್ಲಿ ತುಂಬಿ ತುಳುಕುತ್ತಿತ್ತು ಹೊಸವರ್ಷದ ಸುಮಧುರ ಸಂತೋಷ. ಇದು ಇಂದಿಗೆ ಸರಿಯಾಗಿ ಹನ್ನೆರಡು ವರ್ಷದ ಹಿಂದೆ 'ಅರಳು ಮಲ್ಲಿಗೆ' ಕನ್ನಡ ಶಾಲೆಯಲ್ಲಿ ಮೊದಲನೆಯ ವರ್ಷದ ಯುಗಾದಿ ಹಬ್ಬದ ಸಂಭ್ರಮವಾಗಿತ್ತು.

ಮೊದಲನೆಯ ವರ್ಷ ಕನ್ನಡ ಶಾಲೆಗೆಂದು ಪ್ರತ್ಯೇಕ ಕೋಣೆ ಇರಲಿಲ್ಲ. ಪ್ರತಿ ಭಾನುವಾರವೂ DFW Hindu Cultural Hall ನ ವೇದಿಕೆಯನ್ನೇ ತರಗತಿಯ ಕೋಣೆಯನ್ನಾಗಿ ಮಾಡಿಕೊಂಡು, ಅಲ್ಲಿ ಕನ್ನಡ ಪಾಠ ಸಾಗುತ್ತಿತ್ತು. ತಾಯ್ನಾಡಿನಿಂದ ಬಹುದೂರ ಹುಟ್ಟಿ ಬೆಳೆಯುತ್ತಿರುವ ಕನ್ನಡಬಂಧುಗಳ ಮಕ್ಕಳಿಗೆ, ಕನ್ನಡ ಕಲಿಸಬೇಕೆನ್ನುವ ಪುಟ್ಟ ಆಶಯದೊಂದಿಗೆ ಶುರುವಾದ 'ಅರಳು ಮಲ್ಲಿಗೆ' ಕ್ಲಾಸ್ ಆರಂಭದ ದಿನಗಳಲ್ಲಿ ಕೇವಲ ಕನ್ನಡ ಭಾಷೆಯನ್ನು ಪರಿಚಯಿಸುವುದಕ್ಕೆಂದೇ ಎನ್ನುವ ಭಾವನೆ ಇತ್ತು. ಆದರೆ ಯಾವುದೇ ಭಾಷೆಯನ್ನು ಕಲಿಯುವುದೆಂದರೆ ಅಲ್ಲಿಯ ಸಂಸ್ಕೃತಿಯನ್ನು ಕಲಿಯಲೇಬೇಕು ಎನ್ನುವುದು ನಿರ್ವಿವಾದಾಂಶ. ಆದ್ದರಿಂದ ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮಕ್ಕಳ ವ್ಯಕ್ತಿತ್ವವಿಕಸನಕ್ಕೆ ಪೂರಕವಾಗುವಂತಹ ಸೂಕ್ತ ಚಟುವಟಿಕೆಗಳನ್ನು ರೂಪಿಸಬೇಕೆಂಬ ಗಂಭೀರ ಚಿಂತನೆ ಅತಿ ಶೀಘ್ರದಲ್ಲಿಯೇ ಮಾಡಬೇಕಾಯ್ತು.

ನಾವು ಹೆಮ್ಮೆಪಡುವಂತಹ ನಮ್ಮ ಭಾಷಾಸಂಸ್ಕೃತಿಯನ್ನು ಅವರೂ ಸಹ ಸವಿಯುವಂತೆ ಮಾಡಬೇಕೆಂಬ ನಿಟ್ಟಿನಲ್ಲಿ ಅಕ್ಷರ ಕಲಿಕೆಯ ಜೊತೆ ಜೊತೆಗೇ ನಮ್ಮ ಪ್ರಯತ್ನಗಳೂ, ಪ್ರಯೋಗಗಳೂ ಮುಂದುವರೆಯುತ್ತಿದ್ದವು. ಕರ್ನಾಟಕದ ಪ್ರಮುಖ ಹಬ್ಬಗಳಾದ ಯುಗಾದಿ, ಗೌರಿ-ಗಣೇಶ, ನವರಾತ್ರಿ, ದೀಪಾವಳಿ, ಸಂಕ್ರಾಂತಿ ಮತ್ತು ಶಿವರಾತ್ರಿ ಹಬ್ಬಗಳನ್ನು ಆಯಾ ಹಬ್ಬಗಳು ಬಂದಾಗ ಕತೆ, ಕವಿತೆ ಮತ್ತು ಹರಟೆಗಳ ಮೂಲಕ ಪರಿಚಯ ಮಾಡುತ್ತಿದ್ದೆವು. ಸಾಂಕೇತಿಕವಾಗಿ, ಸುಲಭರೀತಿಯಲ್ಲಿ ಆಯಾ ಹಬ್ಬಗಳನ್ನು ಆಚರಿಸಿ ಸಂಭ್ರಮಿಸುತ್ತಿದ್ದೆವು ಕೂಡ. DFW Hindu Temple ನ ಕಾರ್ಯಕ್ರಮಗಳಲ್ಲಿ ಮಕ್ಕಳು ತಾವು ಶಾಲೆಯಲ್ಲಿ ಕಲಿತದ್ದನ್ನು ಹಾಡುವುದೂ ಇರುತ್ತಿತ್ತು.

ಯುಗಾದಿ ಹಬ್ಬಕ್ಕೆ ಮುಂಚೆಯೇ ಎಲ್ಲರೂ ಕಾಗುಣಿತದ ತನಕ ಅಕ್ಷರಗಳನ್ನು ಬರೆಯುವುದು, ಗುರುತಿಸಿ ಓದುವುದು ಕಲಿತಾಗಿತ್ತು. "ಯುಗ ಯುಗಾದಿ" ಹಾಡಿದ್ದಾದಮೇಲೆ ಬರಿಯ ಗುಣಿತಾಕ್ಷರಗಳನ್ನು ಮಾತ್ರವೇ ಬಳಸಿ ಯುಗಾದಿಗೆಂದೇ ಬರೆದ 'ಚಿಗುರೆಲೆ ಚಿಗುರೆಲೆ ಕಿರುನಗೆ ತೋರು, ವಸಂತ ಕರೆದನು ಕಿರುನಗೆ ತೋರು…' ಹಾಡನ್ನು ಹಾಡಲು ಶುರುಮಾಡಿದರು. ಅದು ಕೇಳುತ್ತಿದ್ದಾಗ ತಮ್ಮ ಮಗ ಅಕ್ಷೋಭ್ ನನ್ನು ಪ್ರತಿ ವಾರ ಕ್ಲಾಸ್ ಗೆ ಕರೆತರುವ ರಘುರಾಂ ಅವರು "ನೀವೀ ಮಕ್ಕಳನ್ನು ನಮ್ಮ 'ಮಲ್ಲಿಗೆ ಕನ್ನಡ ಸಂಘ' ದ ಯುಗಾದಿಯ functionನಲ್ಲಿ ಹಾಡುವುದಕ್ಕೆ ತರಬೇತು ಕೊಡಬಹುದಲ್ವಾ?" ಎಂದು ಕೇಳಿದರು. ಅಲ್ಲಿದ್ದ ತಂದೆತಾಯಿಯರೆಲ್ಲರಿಂದಲೂ ರಘುರಾಂ ಅವರ ಸಲಹೆಗೆ ಅನುಮೋದನೆ ಸಿಕ್ಕಿದ್ದು ನೋಡಿ, ಮಕ್ಕಳೂ ಒತ್ತಕ್ಷರಗಳನ್ನು ಚುರುಕಾಗಿ ಬೇಗ ಬೇಗ ಕಲಿತು ಅಚ್ಚರಿ ಮೂಡಿಸಿದರು. ಮಕ್ಕಳಲ್ಲಿ ಕನ್ನಡದಬಗ್ಗೆ ಇರುವ ಒಲವು ನೋಡಿ ಪೋಷಕರಿಗಾದ ಆನಂದ ಅಪಾರ.

ಯುಗಾದಿಗೆಂದೇ ಇನ್ನೆರಡು ಪದ್ಯಗಳು ರಚನೆಯಾದುವು. ಮಕ್ಕಳು ಅವನ್ನು ಓದಿ ಬರೆಯುವುದಷ್ಟೇ ಅಲ್ಲ, ಹಾಡಲೂ ಕಲಿತು, ಬರಲಿರುವ ಯುಗಾದಿಯ ಕಾರ್ಯಕ್ರಮಕ್ಕೆ ತಯಾರಾದರು.

ಮಕ್ಕಳ ಹಾಡನ್ನು ವರ್ಣರಂಜಿತಗೊಳಿಸಲು ಚಿಗುರೆಲೆ, ಹೂವು ಮತ್ತು ಮಿನುಗುವ ನಕ್ಷತ್ರಗಳ props ತಯಾರು ಮಾಡಿ ತಂದರು ನಿರುಪಮ ಶರ್ಮಾ, ಚಂಚಲ ಮತ್ತು ರೂಪಾ ನಾಗರಾಜ್. ವಿನಯಾ ರಘುರಾಂ ನಿರೂಪಣೆಯಲ್ಲಿ ಮಕ್ಕಳು ಪ್ರಸ್ತುತಪಡಿಸಿದ ಯುಗಾದಿ ಕಾರ್ಯಕ್ರಮಕ್ಕೆ ತುಂಬಾ ಪ್ರಶಂಸೆ ಸಿಕ್ಕಿತು. ಸಭಿಕರ ಸಂತೋಷ ಅವರ ಚಪ್ಪಾಳೆಯಿಂದ ವ್ಯಕ್ತವಾಗಿದ್ದು ನೋಡಿ ಮಕ್ಕಳ ಮತ್ತು ಪೋಷಕರ ಯುಗಾದಿಯ ಸಂತೋಷ ದುಪ್ಪಟ್ಟಾಯಿತು. ಅದು ಕನ್ನಡ ಶಾಲೆಯ ಮಕ್ಕಳು 'ಮಲ್ಲಿಗೆ ಕನ್ನಡ ಸಂಘ' ದ function(ಇಂದಿನ MKANT) ನಲ್ಲಿ ಭಾಗವಹಿಸಿದ ಮೊಟ್ಟಮೊದಲ ಸಾಂಸ್ಕೃತಿಕ ಕಾರ್ಯಕ್ರಮ. ನಿಜವಾಗಿ ಹೇಳಬೇಕಂದ್ರೆ ಅಂದು ಶಾಲೆಯ ಮಕ್ಕಳಿಗೆ ಎರಡೆರಡು ಸಲ ಯುಗಾದಿಯ ಸಡಗರ, ಸಂಭ್ರಮ, ಸಂತೋಷ ಸಿಕ್ಕ ಅನುಭವವಾಯ್ತು.

*ಹಸಿ ಗೋಡೆ ಮೇಲೆ ಹರಳು ಎಸೆದಂತೆ*

ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳು ಮೇಧಾ ಭಾರದ್ವಾಜ್, ಹರ್ಷ ಉಪಾಧ್ಯ, ಬದರಿ ಪಂಡರಿನಾಥ್, ಅಕ್ಷೋಭ್ ರಘುರಾಮ್, ಅಂಕಿತ್ ಶರ್ಮಾ, ಅನಿರುದ್ಧ್ ಶರ್ಮಾ ಮತ್ತು ಸಿಂಧು ಶ್ರೀನಾಥ್.

DFWನ ಕನ್ನಡಿಗರನ್ನು ಒಟ್ಟುಗೂಡಿಸಲು ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಳ್ಳಬೇಕೆಂಬ ಸದಾಶಯದಿಂದ ಆ ಯುಗಾದಿಯಂದೇ ಮೀನಾ ಭಾರದ್ವಾಜ್, ನಾಗರಾಜ್ ಉಪಾಧ್ಯ ಮತ್ತು ರವಿ ಶರ್ಮಾರವರು 'ಮಲ್ಲಿಗೆ ಕನ್ನಡ ಸಂಘ' ದ ಕಾರ್ಯಕಾರಿ ಸಮಿತಿಯನ್ನು ಸೇರಿದರು. ಅಂದಿನಿಂದ ಶುರುವಾಯ್ತು 'ಅರಳು ಮಲ್ಲಿಗೆ' ಮತ್ತು 'ಮಲ್ಲಿಗೆ ಕನ್ನಡ ಸಂಘ'ಗಳ ಮಧ್ಯೆ ಒಂದು ಭಾವನಾತ್ಮಕ ಸಂಬಂಧ. ಈ ಎರಡು ಉತ್ಸಾಹೀ ತಂಡಗಳ ಮಧ್ಯೆ ಬೆಳೆದು ಬಂದ ಸ್ನೇಹ ಸೌಹಾರ್ದತೆಯ ಶುಭಾರಂಭವಾಗಿದ್ದು ಯುಗಾದಿಯ ಸಂಭ್ರಮದ ಶುಭದಿನದಂದೇ!

ಅಂದಿನಿಂದ ಮಕ್ಕಳು ಕನ್ನಡ ಸಂಸ್ಕೃತಿಯನ್ನು ಕಲಿತು ಆದರಿಸಲು ಮತ್ತು ಹಿರಿಯರು ಅದನ್ನು ಬೆಳೆಸಿ ಆಸ್ವಾದಿಸಲು, 'ಅರಳು ಮಲ್ಲಿಗೆ' ಮತ್ತು 'ಮಲ್ಲಿಗೆ ಕನ್ನಡ ಸಂಘ' ಎರಡೂ ಹಲವಾರು ರೀತಿಯಲ್ಲಿ ಪರಸ್ಪರ ಸಹಕಾರ, ಬೆಂಬಲಗಳೊಂದಿಗೆ ಮುನ್ನಡೆಯುತ್ತಾ ಬಂದಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಕನ್ನಡದ ಕಂದಮ್ಮಗಳು ಶಾಲೆಯಲ್ಲಿ ಭೇಟಿಯಾದಾಗ ಕನ್ನಡದಲ್ಲೇ ಮಾತಾಡುವ ಹಾಗೆ ಅವರನ್ನು ತಯಾರು ಮಾಡಬೇಕೆಂಬ ಮಹತ್ವಾಕಾಂಕ್ಷೆ ಹೊತ್ತು ಮಾಡಿದ ಹಲವಾರು ಪ್ರಯತ್ನಗಳು ವಿಫಲವಾದಾಗ ಬೇವಿನ ಕಹಿ ಉಂಡರೂ, ಮಕ್ಕಳು ಅವರ ಪ್ರಗತಿಯಿಂದ ಅವರದೇ ಆದ, ಮೊಗ್ಗರಳಿ ಹೂವಾಗಿ ಮಲ್ಲಿಗೆಯು ಪರಿಮಳವನ್ನು ಹರಡುವ ಶೈಲಿಯಲ್ಲಿ ನಸುನಗುತ್ತಾ ಕೊನೆಗೆ ಎಲ್ಲರಿಗೂ ಬೆಲ್ಲದ ಸಿಹಿಯೇ ಉಳಿಯುವಂತೆ ಮಾಡಿದ್ದರು. ಮಕ್ಕಳು ತಮ್ಮ ಸತತ ಪರಿಶ್ರಮದಿಂದ ಯುಗಾದಿ ಹಬ್ಬದ ಕಾರ್ಯಕ್ರಮದಲ್ಲೂ ಕನ್ನಡ ಪ್ರೇಮ ಮೆರೆದದ್ದು ಸ್ಫೂರ್ತಿದಾಯಕವಾಗಿತ್ತು. ಶಾಲೆಗೆ ಹೊಸದಾಗಿ ಕೆಲವು ಮಕ್ಕಳು ಮತ್ತು ಯುವಕ-ಯುವತಿಯರು ಸೇರುವುದಕ್ಕೆ ಪ್ರೇರಣೆಯಾಯ್ತು.

ಪ್ರತಿ ವರ್ಷವೂ ಹೊಸಬರ ಬರುವಿಕೆಯಿಂದ ಹೊಸತನ ಮೂಡಿಸಿ ಕಂಗೊಳಿಸುತ್ತಾ, ಹೆಚ್ಚೆಚ್ಚಿಗೆ ಕನ್ನಡ ಮನಸ್ಸುಗಳನ್ನು ಒಂದಾಗಿಸುತ್ತಾ ಸ್ವಯಂಸೇವಕರ ಸಮರ್ಪಣಾಶೀಲತೆಯಿಂದ ಮತ್ತು ಸಹೃದಯ ಪೋಷಕರ ಸಹಕಾರದಿಂದ ಶಾಲೆ ಹನ್ನೆರಡು ಯಶಸ್ವೀ ವಸಂತಗಳನ್ನು ಸವಿದು teenage ಗೆ ತಲುಪಿರುವ ಈ ಶುಭಸಂದರ್ಭದಲ್ಲಿ ಕನ್ನಡಬಾಂಧವರೆಲ್ಲರಿಗೂ ಯುಗಾದಿಯ ಹಾರ್ದಿಕ ಶುಭಾಶಯಗಳು. ಈ ಯುಗಾದಿಯು ಎಲ್ಲರಲ್ಲೂ ಹೊಸ ಹುರುಪನ್ನು ಮೂಡಿಸಿ, ಹೊಸ ಹರುಷ ತರಲೀ. ಹೊಸ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಿಸುವ ಶುಭಾರಂಭವಾಗಲೀ. ಎಲ್ಲರಿಗೂ ಒಳಿತಾಗಲೀ.

**ಟೀಕೆ - ಟಿಪ್ಪಣಿ**

## *ಸಂಪಾದಕೀಯ*



ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು. ಯುಗಾದಿಯನ್ನು ಮನುಷ್ಯನಿಗೆ ನೆನಪಿಸುವುದು ಪ್ರಕೃತಿ. ವಸುಂಧರೆಯ ಒಡಲಲಿ ಹೊಚ್ಚಹೊಸ ಹಚ್ಚಹಸಿರುಡುಗೆ, ಶುಭ ಕೋರುವ ಹಕ್ಕಿಯುಲಿ. ಬೇಂದ್ರೆಯವರು ನುಡಿದಂತೆ "ವರುಷಕೊಂದು ಹೊಸತು ಜನ್ಮ ಅಖಿಲ ಜೀವ ಜಾತಕೆ". ನಮಗೋ, ನಡೆದು ಬಂದ ಹಾದಿಯ ಕಡೆಗೊಮ್ಮೆ ಕಿರುನೋಟ ಬೀರಿ, ಮುಂದೆ ಸಾಗುವ ಪಯಣ. ತುಂಬಿದ ಬದುಕಿನ ಭಾಷ್ಯವೆಂಬಂತೆ ಬೇವು-ಬೆಲ್ಲದ ಮಿಶ್ರಣ. "ಇದು ಶಿಶಿರ ಹೀಗಿದೆ, ಇರುವುದೇ ಹೀಗೆ, ನಗುನಗುತಾ ಎದುರಿಸುವ ನಿರಾಶರಾಗದೆ" ಎಂಬ ಕವಿವಾಣಿಯಲ್ಲಿ ನೋವನು ಗೆಲ್ಲುವ ಸಮಾಧಾನವಿದೆ. ಮರುನುಡಿಯಲ್ಲೇ "ಬಂದೇ ಬರುವುದು ವಸಂತ ಬಾಳಿಗೆ" ಎಂಬ ಆಶಾಕಿರಣವಿದೆ.

ಇಂತಹ ನವಚೇತನದ ಹಬ್ಬವನ್ನು ಸ್ವಾಗತಿಸಲು ನೀವು ಮನೆಯ ಹೆಬ್ಬಾಗಿಲಿಗೆ ತೋರಣ ಕಟ್ಟುತ್ತಿರಬಹುದು. ಈ ಕ್ಷಣದಲ್ಲಿ ನಿಮ್ಮೊಡನೆ ಹೊಸತಳಿರ ಸುಗಂಧವೇ ಇರಬಹುದು ಅಥವಾ ಪ್ಲಾಸ್ಟಿಕ್ ತೋರಣ ತರುವ ನೆನಪ ಘಮವಿರಬಹುದು. ಅದೇ ವೇಳೆಯಲ್ಲಿ ನಿಮ್ಮ ಮನಕೆ ಉಲ್ಲಾಸ ಹರಡಲು "ಕಂಪು" Webಬಾಗಿಲಿನಲ್ಲಿ ಕಾದು ನಿಂತಿದೆ. ಒಂದು ಸೃಜನಾತ್ಮಕ ಸಮುದಾಯದ ಕೊಡುಗೆಯಾಗಿರುವ ಈ "ಕಂಪು", ನಿಮ್ಮ ಮನೆಯಂಗಳದಲ್ಲಿ ಅರಳಿನಿಂತ ಹೂವುಗಳಷ್ಟೇ ಹಿತಕೊಡಬಲ್ಲುದು ಎಂದು ನಂಬಿಕೆ.

ಶ್ರೀಖರನಾಮ ಸಂವತ್ಸರ ಯುಗಾದಿ ಎಲ್ಲರಿಗೂ ಶುಭ ತರಲಿ.

ಶುಭಾಶಯಗಳೊಂದಿಗೆ
ಪೂರ್ಣಿಮ ಸುಬ್ರಹ್ಮಣ್ಯ.

*ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ*

ಮುಖಪುಟ

## Jynx machine

Jynx machine is out of order
Please insert another quarter
Found a quarter in my pocket
With the picture of a rocket

Jynx machine is out of order
Please insert another quarter!



ಪ್ರಣವ್ ಕಾಗಿನೆಲೆ

(6..5 Years)

## The best trick

One day I was walking
When a man said to me
That a best trick above all!
Is to spin around
Keeping your head on the ground
with that, he walked into a wall!


ಟೀಕೆ - ಟಿಪ್ಪಣಿ

***Un-jumble these words to find a movie name.***

ಕೆಣಕು-ತಿಣುಕು

- ನಾಗಶ್ರೀ ಶ್ರೀನಿವಾಸ್






ಉತ್ತರಗಳು ಪುಟ 18

ಟೀಕೆ - ಟಿಪ್ಪಣಿ

ಬೆಳೆಯೋ ಸಿರಿ ಮೊಳಕೆಲಿ ನೋಡು

## ಸ್ಮೃತಿ ಮಹೇಶ್



Irvingನ ಪುಟಾಣಿ ಸಿರಿಗೆ ತನ್ನ ಆಟ-ಪಾಠಗಳಿಗೆ ಒಬ್ಬ ಪುಟ್ಟ ಜೊತೆಗಾತಿ ಸಿಕ್ಕಳೆಂಬ ಹಿಗ್ಗು. ಸಿಂಧು ಮತ್ತು ಮಹೇಶ್ ಅವರ ಮನೆಗೆ ಮುದ್ದು "ಸ್ಮೃತಿ" ಬಂದದ್ದು ಜೂನ್ 21. ಸಂಘದ ಪರವಾಗಿ ಅವರ ಕುಟುಂಬಕ್ಕೆ ಅಭಿನಂದನೆಗಳು, ಮುದ್ದು ಸ್ಮೃತಿಗೆ ಶುಭ ಹಾರೈಕೆಗಳು.

## ಅನೀಶ್ ಶರ್ಮ

ಫೆಬ್ರವರಿ 14, Frisco ನಗರದ ಚೈತ್ರ ಮತ್ತು ಶ್ರೀಧರ್ ದಂಪತಿಗಳಿಗೆ ಡಬಲ್ ಸಂಭ್ರಮ. ಪ್ರೇಮಿಗಳ ದಿನದಂದು ಅವರ ಪ್ರೀತಿಯ ಕುಡಿ "ಅನೀಶ್"ನ ಜನನ. ಅಣ್ಣ ಅರ್ಚಿತ್ ಮಾತಿಗೆ ಸಿಕ್ಕುತ್ತಿಲ್ಲ, ತಮ್ಮನ ಆರೈಕೆಯಲ್ಲಿ ತಲ್ಲೀನ. ಸಂಘದ ಪರವಾಗಿ ಅವರ ಕುಟುಂಬಕ್ಕೆ ಅಭಿನಂದನೆಗಳು, ಮುದ್ದು ಅನೀಶ್‌ಗೆ ಶುಭ ಹಾರೈಕೆಗಳು.



## ಪ್ರದ್ಯೋತ್ ಭಟ್



Frisco ನಗರದಲ್ಲಿರುವ ಛಾಯ ಮತ್ತು ವಿನಾಯಕ್ ಭಟ್ ದಂಪತಿಗಳ ಮನೆಗೆ ಫೆಬ್ರವರಿ 17ರಂದು ಪುಟಾಣಿ ಪ್ರದ್ಯೋತ್‌ನ ಆಗಮನ. ಅಣ್ಣ ಪ್ರಜ್ವಲ್‌ಗೆ ವಿಶೇಷ ಸಂಭ್ರಮ. ಸಂಘದ ಪರವಾಗಿ ಅವರ ಕುಟುಂಬಕ್ಕೆ ಅಭಿನಂದನೆಗಳು, ಮುದ್ದು ಪ್ರದ್ಯೋತ್‌ಗೆ ಶುಭ ಹಾರೈಕೆಗಳು.

*ತೊಟ್ಟಿಲನ್ನು ತೂಗುವ ಕೈ ಜಗತ್ತೇ ತೂಗುತ್ತೆ*

# ಮಲ್ಲಿಗೆ ಮೊಗ್ಗುಗಳು

- ಮೀನಾ ಭಾರದ್ವಾಜ್



## Suhith Shivani

**Parents:**
Anu Shivani and Manjunath Shivani
**Brother:**
Nikhith Shivani

Currently at Univ Of Texas in Business Honors program with full scholarship.
Plano East Senior High School– Class of 2010
International Baccalaureate (IB) Student



**Club and Awards**
Founder, President of the Plano Economics club.
Future Business Leaders of America (FBLA) - President of the club for 3 years in a row and have won the 1st place in state level and national levels competition.
Plano City Youth Leadership Program (PYL) -one of the few selected for that program.
National Merit Finalist
Plano ISD Trustee Award of Excellence for 2 years in a row.
Science Fair State 2nd place
Member of National Honor Society

**Internships:**
One of the six kids selected from the South east region to participate in NASA INSPIRE Program Internship - Johnson Space Center, Houston
Did research on work of Einstein and Bose in the Center for Ultra Cold Atoms at MIT
Worked in Department of Neurosciences at university of Dallas.

He loves sports, has played Football and basketball in middle school.

ಟೀಕೆ - ಟಿಪ್ಪಣಿ

ದುಡ್ಡೇ ದೊಡ್ಡಪ್ಪ, ವಿದ್ಯೆ ಅವರಪ್ಪ

ಮುಖಪುಟ

## ಸಬ್ಬಿಗೆ ಸೊಪ್ಪಿನ ತಂಬುಳಿ

ಉಮ ಗಿರಿಧರ್



### ಸಾಮಗ್ರಿಗಳು

ಸಬ್ಬಿಗೆ ಸೊಪ್ಪು - 1 ಕಟ್ಟು
ಮೆಣಸು - 1ಟೀ ಸ್ಪೂನ್
ಜೀರಿಗೆ - 1ಟೀ ಸ್ಪೂನ್
ಮೊಸರು - 2 ಕಪ್
ಹಸಿ ಕೊಬ್ಬರಿ - 1/2 ಕಪ್
ತುಪ್ಪ - 1 ಟೇಬಲ್ ಸ್ಪೂನ್
ಇಂಗು - ರುಚಿಗೆ ತಕ್ಕಷ್ಟು
ಉಪ್ಪು - ರುಚಿಗೆ ತಕ್ಕಷ್ಟು

### ವಿಧಾನ

ಸೊಪ್ಪು, ಮೆಣಸು, ಜೀರಿಗೆಯನ್ನು ಸ್ವಲ್ಪ ತುಪ್ಪ ಹಾಕಿ(ನೀರು ಹಾಕದೆ) 5 ನಿಮಿಷ ಹುರಿಯಬೇಕು. ಆರಿದ ನಂತರ, ಕೊಬ್ಬರಿಯನ್ನು ಸೇರಿಸಿ, ಗಟ್ಟಿಯಾಗಿ ರುಬ್ಬಿಕೊಳ್ಳಬೇಕು. ಈ ಮಿಶ್ರಣಕ್ಕೆ ಮೊಸರು ಹಾಗು ಉಪ್ಪು ಹಾಕಿ ಕಲಸಬೇಕು. 1 ಟೀ ಸ್ಪೂನ್ ತುಪ್ಪದಲ್ಲಿ ಸಾಸಿವೆ-ಜೀರಿಗೆ-ಇಂಗು ಒಗ್ಗರಣೆ ಹಾಕಬೇಕು.

ಊಟದ ಆರಂಭದಲ್ಲಿ ಬಿಸಿಬಿಸಿ ಅನ್ನವನ್ನು ಈ ತಂಬುಳಿಯಲ್ಲಿ ಕಲಸಿ ತಿಂದರೆ ನಾಲಿಗೆ ಮತ್ತು ದೇಹ ಎರಡಕ್ಕೂ ತಂಪು!



## ಮೆಂತ್ಯ ಸೊಪ್ಪು - ಬಟಾಣಿ ಪಲಾವ್

ಚೈತ್ರ ಶ್ರೀಧರ್



### ಸಾಮಗ್ರಿಗಳು

ಬಾಸುಮತಿ ಅಕ್ಕಿ - 2 ಕಪ್
ಬಟಾಣಿ - 1 ಕಪ್
ಮೆಂತ್ಯಸೊಪ್ಪು - 1 ಕಟ್ಟು
ಹಸಿಮೆಣಸಿನಕಾಯಿ 3-4
ಚಕ್ಕೆ 2-3
ಲವಂಗ 3-4
ಏಲಕ್ಕಿ 3-4
ಶುಂಠಿ-ಬೆಳ್ಳುಳ್ಳಿ ಪೇಸ್ಟ್ - 2ಟೀ ಸ್ಪೂನ್
ಎಣ್ಣೆ - 2 ಟೇಬಲ್ ಸ್ಪೂನ್
ಗೋಡಂಬಿ(ಅಲಂಕಾರಕ್ಕಾಗಿ) - 1 ಹಿಡಿ
ಕೊತ್ತಂಬರಿ ಸೊಪ್ಪು (ಅಲಂಕಾರಕ್ಕಾಗಿ)
ಉಪ್ಪು - ರುಚಿಗೆ ತಕ್ಕಷ್ಟು
ಸಾಸಿವೆ, ಜೀರಿಗೆ - ಒಗ್ಗರಣೆಗೆ



### ವಿಧಾನ

ಕುಕರ್ ನಲ್ಲಿ 2ಟೇಬಲ್ ಸ್ಪೂನ್ ಎಣ್ಣೆ ಹಾಕಿ, ಅದು ಕಾದ ನಂತರ ಸಾಸಿವೆ-ಜೀರಿಗೆ ಒಗ್ಗರಣೆ ಹಾಕಿ. ಚಕ್ಕೆ, ಲವಂಗ, ಏಲಕ್ಕಿ, ಸೀಳಿದ ಹಸಿಮೆಣಸಿನಕಾಯಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಕೈಯಾಡಿಸಿ. ನಂತರ ಬಿಡಿಸಿಟ್ಟ ಮೆಂತ್ಯಸೊಪ್ಪು ಹಾಗು ಬಟಾಣಿ ಹಾಕಿ 2 ನಿಮಿಷ ಕೈಯಾಡಿಸಿ.ಇದಕ್ಕೆ 2 ಕಪ್ ತೊಳೆದಿಟ್ಟ ಅಕ್ಕಿ, 4 ಕಪ್ ಕುದಿಸಿದ ನೀರನ್ನು ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮುಚ್ಚಿಟ್ಟು 2 ವಿಷಲ್ ಬಂದ ನಂತರ ಆರಿಸಬೇಕು. ಆರಿದ ನಂತರ, Serving Bowlಗೆ ಹಾಕಿ, ಹೆಚ್ಚಿಟ್ಟ ಕೊತ್ತಂಬರಿ ಸೊಪ್ಪು ಹಾಗೂ ತುಪ್ಪದಲ್ಲಿ ಕರಿದ ಗೋಡಂಬಿಯಿಂದ ಅಲಂಕರಿಸಬೇಕು.

ಈರುಳ್ಳಿ- ಟೊಮೇಟೋ ರಾಯತ(ಮೊಸರುಬಜ್ಜಿ) ಜೊತೆ ತಿನ್ನಲು ಈ ಪಲಾವ್ ಬಲು ರುಚಿ!

ಟೀಕೆ - ಟಿಪ್ಪಣಿ

*ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ*

ಮುಖಪುಟ

## ಅಮೃತ ಫಲ ಬರ್ಫಿ

### ಸಾಮಗ್ರಿಗಳು

ಹಾಲು - 1 ಬಟ್ಟಲು

ತೆಂಗಿನ ಕಾಯಿ ಹಾಲು - 1 ಬಟ್ಟಲು

ಸಕ್ಕರೆ - 1 ಬಟ್ಟಲು

ತುಪ್ಪ - 2 ಚಮಚ

### ವಿಧಾನ

ಒಂದು ತಟ್ಟೆಗೆ ತುಪ್ಪ ಸವರಿ ಪಕ್ಕಕ್ಕೆ ಇಟ್ಟುಕೊಳ್ಳಿ. ದಪ್ಪ ತಳದ ಪಾತ್ರೆಯಲ್ಲಿ ಹಾಲು, ತೆಂಗಿನಕಾಯಿ ಹಾಲು ಮತ್ತು ಸಕ್ಕರೆ ಬೆರೆಸಿ ಒಲೆಯ ಮೇಲೆ ಸಣ್ಣ ಉರಿಯಲ್ಲಿ ಸತತವಾಗಿ ತೊಳಸಿ. ಸತತವಾಗಿ ತೊಳಸದೆ ಹೋದರೆ ಬರ್ಫಿ ಬಣ್ಣ ಕೆಟ್ಟು ಹೋಗುವುಧು. ಈ ಮಿಶ್ರಣ ಕ್ರಮೇಣ ಗಟ್ಟಿ ಆಗಿ, ಪಾತ್ರೆಯ ಅಂಚಿಂದ ಬಿಟ್ಟುಕೊಳ್ಳುತ್ತಾ ಹೋಗುತ್ತೆ. ಆಗ ಒಲೆಯ ಮೇಲಿಂದ ಕೆಳಗೆ ಇಳಿಸಿ ಚೆನ್ನಾಗಿ ಕಲೆಸಿ, ತುಪ್ಪ ಸವರಿದ ತಟ್ಟೆಗೆ ಹಾಕಿ, ನಿಮ್ಮ ಇಷ್ಟದ ಆಕಾರದಲ್ಲಿ ಕತ್ತರಿಸಿ.



P.S. ಈ ಯುಗಾದಿ ಹಬ್ಬದ ದಿನ ಈ ಬರ್ಫಿ ಮಾಡಿ, ನಮಗೂ ಕೊಟ್ಟು, ನೀವೂ ತಿನ್ನಿ ;-)



ರಾಜಶ್ರಿ ರಮೇಶ್

## ಮಾವಿನಕಾಯಿ ಗೊಜ್ಜು

### ಸಾಮಗ್ರಿಗಳು

ಹುಳಿ ಮಾವಿನಕಾಯಿ - 2

ತೆಂಗಿನಕಾಯಿ ತುರಿ - 1 /2 ಬಟ್ಟಲು

ಉದ್ದಿನ ಬೇಳೆ - 1 ಚಮಚ

ಜೀರಿಗೆ - 1 ಚಮಚ

ಮೆಂತ್ಯ - 1 / 2 ಚಮಚ

ಕೆಂಪು ಮೆಣಸಿನಕಾಯಿ - 6

ಬೆಲ್ಲ - ರುಚಿಗೆ ತಕ್ಕ ಹಾಗೆ

ಉಪ್ಪು - ರುಚಿಗೆ ತಕ್ಕ ಹಾಗೆ

ಅಡಿಗೆ ಎಣ್ಣೆ - 3 ಚಮಚ

ಸಾಸಿವೆ - 1 ಚಮಚ

ಇಂಗು - ಚಿಟಿಕೆ

ಕರಿಬೇವು - 1 ಎಸಳು



### ವಿಧಾನ

- 1 ಚಮಚ ಎಣ್ಣೆ ಕಾಯಿಸಿ ಉದ್ದಿನ ಬೇಳೆ, ಕೆಂಪು ಮೆಣಸಿನಕಾಯಿ, ಜೀರಿಗೆ, ಮೆಂತ್ಯ, ಚೆನ್ನಾಗಿ ಹುರಿದುಕೊಳ್ಳಿ.
- ಹುರಿದಿರುವ ಸಾಮಗ್ರಿಗಳಿಗೆ ತೆಂಗಿನ ತುರಿ ಬೆರೆಸಿ ಸ್ವಲ್ಪ ನೀರು ಹಾಕಿ ರುಬ್ಬಿಕೊಳ್ಳಿ.
- 1 ಚಮಚ ಎಣ್ಣೆ ಕಾಯಿಸಿ ಮಾವಿನಕಾಯಿ ಹೋಳುಗಳನ್ನು ಅದಕ್ಕೆ ಹಾಕಿ ಸ್ವಲ್ಪ ಹುರಿದುಕೊಂಡು ಬೇಯಿಸಿಕೊಳ್ಳಿ
- ಬೆಂದ ಹೋಳಿಗೆ ರುಬ್ಬಿರುವುದನ್ನು ಹಾಕಿ, ಉಪ್ಪು, ಬೆಲ್ಲ ಬೆರೆಸಿ ಸ್ವಲ್ಪ ಕುದಿಯಲು ಬಿಡಿ.
- 1 ಚಮಚ ಎಣ್ಣೆ ಕಾಯಿಸಿ, ಸಾಸಿವೆ, ಇಂಗು, ಕರಿಬೇವು ಒಗ್ಗರಣೆ ಮಾಡಿಕೊಂಡು ಗೊಜ್ಜಿಗೆ ಬೆರೆಸಿ.
-

P.S: ಮಾವಿನಕಾಯಿ ತುಂಬಾ ಹುಳಿ ಇಲ್ಲದದಿದ್ದರೆ, ಉಪ್ಪು ಬೆಲ್ಲ ಹಾಕಿದ ಸಮಯದಲ್ಲಿ ಸ್ವಲ್ಪ ಹುಣಸೆಹಣ್ಣಿನ ರಸ ಸೇರಿಸಬಹುದು.

ಟೀಕೆ - ಟಿಪ್ಪಣಿ

ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ

# UGAADI – A CELEBRATION OF JOY

Ramya Ashok



***U***GAADI is a combination of two words-Yuga(era) and Aadi(beginning) according to the ancient language of Sanskrit and Kannada languages. It simply means beginning of an era or a new year. According to the great Indian mathematician, Bhaskaracharya's calculations in the 12 th century, it is the first day of the new moon after the Sun crosses from South to North on Spring Equinox. It marks the end of all things old, and new beginnings are looked forward to. On this day mantras are chanted and predictions made for the New Year. This auspicious day is known for its "Panchang Sravanam" chanted by Veda Pandits. Panchaang contains astronomical data relating to the position of the Sun, The Moon, Planets, Stars and details of Eclipses, Occultations, Raasi results, Muhurtams etc. for one complete year (usually from April to March). It is also believed that the creator of the Hindu pantheon Lord Brahma started creation on this day - Chaitra suddha padhyami or the Ugaadi day.

Ugaadi festival heralds both Spring and Hindu New Year. In Spring the flowers bloom, this colorful blossom signifies growth, prosperity and well-being. The mildly fragrant Jasmine flowers are in full bloom and are strung together to be used to decorate hair braids, and over doorways and offered as garlands for pujas.

Spring is the season for raw mangoes; people make good use of mangoes to last them until the next season. They pickle the mangoes with salt, powdered mustard and powdered dry red chilli and a lot of oil to float over the mangoes. This preparation is called "avakai" and lasts for a whole year.

The fully blossomed neem tree makes the air healthy. Also, jaggery made with fresh crop of sugarcane adds a renewed flavor to the typical dishes associated with Ugaadi. "Ugaadi pachchadi" is one such dish. It is made of new jaggery, raw mango pieces and neem flowers and new tamarind which truly reflect life - a combination of sweet, sour and bitter tastes!

We use mango leaves and coconuts (as in a Kalasam, to initiate any pooja) on auspicious occasions to propitiate gods. People also splash fresh cow dung water on the ground in front of their house and draw colorful floral designs. This is a common sight in every household. People perform the ritualistic worship to God invoking his blessings before they start off with the New Year. They pray for their health, wealth and prosperity and success. Ugaadi is also the most auspicious time to start new ventures.

Ugaadi marks the beginning of the hot season which coincides with the school vacations. For the young ones, therefore, Ugaadi is characterized by new clothes, sumptuous food and reveling. The air is filled with joy and enthusiasm.

The Hindus of Kashmir start their new year - Navreh - in mid March. At the same time, the southern Indian states of Karnataka and Andhra Pradesh begin their new year - Ugaadi. The Maharashtrians celebrate their New Year Gudi Padwa, and the Sindhis observe Cheti Chand, the coming of New Year, during the same time.

The celebration of Ugaadi is marked by religious zeal and social merriment. Special dishes are prepared for the occasion. In Karnataka , eatables such as "puliogar ", "holige" and preparations made with raw mango go well with the occasion. In Andhra Pradesh too, similar preparations are made but called "pulihora" and "bobbatlu". Maharashtrians make "puran poli" or sweet rotis.

Some visit temples and relatives in the evening to offer bevu-bella (neem & jaggery). This is done to offer good wishes to everyone in the hope that they will enjoy life to the fullest in the new year with a little of both happiness and sadness. YAKSHAGANA, a folk dance is performed by the troupe in several towns and villages to mark the occasion.

Ugaadi is thus a festival of many shades. This arrival of spring ushers in the New Year, brings a rich bounce of flora and fills the hearts of people with joy and contentment.

ಟೀಕೆ - ಟಿಪ್ಪಣಿ

ಬಲ್ಲವನೇ ಬಲ್ಲ ಬೆಲ್ಲದ ರುಚಿಯ

# ಟೀಕೆ-ಟಿಪ್ಪಣಿ

ಕಂಪು "ಸಂಕ್ರಾಂತಿ" ಸಂಚಿಕೆಗೆ ನಿಮ್ಮಿಂದ ಬಹಳ ಉತ್ತಮ ಪ್ರತಿಕ್ರಿಯೆ ದೊರಕಿತು. ಅದರಲ್ಲಿ ಬಹುಪಾಲು ಪ್ರಶಂಸೆಯೇ ಎನ್ನುವುದು ಸಂತಸದ ವಿಷಯ. ಹಲವರು ಮುಖತ: ಅಭಿಪ್ರಾಯ ವ್ಯಕ್ತಪಡಿಸಿದರೆ, ಕೆಲವರು ಬರೆದು ತಿಳಿಸಿದರು. ಆ ಸಂಗ್ರಹ ಇಲ್ಲಿ ನಿಮ್ಮ ಮುಂದಿದೆ.

ಕಂಪು ಓದಿ, ನೀವೂ ನಿಮಗನ್ನಿಸಿದ್ದನ್ನು ಬರೆಯಿರಿ. ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಅನುಕೂಲಕ್ಕಾಗಿ ಪ್ರತಿ ವಿಭಾಗದಲ್ಲೂ *"ಟೀಕೆ-ಟಿಪ್ಪಣಿ"* ಎಂಬ ಕೊಂಡಿಯಿದೆ. ಅದನ್ನು ಚಟುಕಿಸಿದಾಗ ತೆರೆಯುವ ಕಿಟಕಿಯಲ್ಲಿ ನಿಮ್ಮ ಅಭಿಪ್ರಾಯ ದಾಖಲಿಸಬಹುದು.

ಮಲ್ಲಿಗೆ ಮಾಲೆಯ 'ಕಂಪು' ಮನಸ್ಸಿಗೆ ತಂಪೆರೆಯುವಂತಿದೆ. It was, indeed, a wonderful idea to put a photo along with the contributions. ಖೋ ಖೋ ಕತೆ ಕುತೂಹಲಕಾರಿಯಾಗಿ ಮೂಡಿಬಂದಿದೆ. ಅರಳುಪ್ರತಿಭೆಯನ್ನು ಪರಿಚಯಿಸುವ 'ಮಲ್ಲಿಗೆ ಮೊಗ್ಗುಗಳು' ಮತ್ತು 'ಕನ್ನಡ ಕಲಿ' ಅಂಕಣಗಳೂ ಚೆನ್ನಾಗಿವೆ. ವಿವಿಧ ಕುಸುಮಗಳನ್ನು (ಎಲ್ಲರನ್ನೂ ಎಲ್ಲವನ್ನೂ ಒಟ್ಟುಗೂಡಿಸಿ) ಪೋಣಿಸಿದ ಪರಿಮಳಯುಕ್ತ ಮಾಲೆ. - ಸುಧಾ ಶ್ರೀನಾಥ್

ಇದು ಒಂದು News Letter ಅಲ್ಲ. ಇದು ಒಂದು ಕಿರು ಹೊತ್ತಿಗೆ. ಈಗಷ್ಟೆ ಇದನ್ನು ಪ್ರಿಂಟಿಸಿ ಆರಾಮವಾಗಿ ಕುಳಿತು ಓದಿದೆ.ಇದು ಸುಂದರ ಮಲ್ಲಿಗೆ ಹೂವುಗಳನ್ನು ಆಯ್ದು ಕಟ್ಟಿದ ಸುಂದರ ಮಾಲೆ ಅಂದರೆ ತಪ್ಪಾಗುವುದಿಲ್ಲ. ನಾವು ಭಾರತದಲ್ಲಿ ಇದ್ದಾಗ ಕಾದು ಕುಳಿತು ಸುಧಾ, ತರಂಗ ಹಾಗು ಮಯುರವನ್ನು ಓದುತಿದ್ದ ಅನುಭವವನ್ನು ಕೊಟ್ಟಿತು. ಸದಭಿರುಚಿಯ ಕಂಪನ್ನು ಹೀಗೆ ಮುಂದುವರೆಸಿ. ಸುಧಾ ಶ್ರೀನಾಥ್ ಅವರ ಸಂಕ್ರಾಂತಿ ಮತ್ತು Sesame Street ಲೇಖನ ನೋಡಿ ಆದ ಸಂತೋಷ ಅಷ್ಟಿಷ್ಟಲ್ಲ. ಅವರು ತಂದ ಹಸಿರು ಕಡಲೆಯ ನೆನಪು ಸಹ ನಾವು ಮರೆತಿಲ್ಲ. It's such a nice and neat 'Aralu Mallige Shale' . -ಮೀನಾ ಭಾರದ್ವಾಜ್

Thanks for a really nice magazine Kampu. Keep up the great work! -Pushpalatha Arakotaram

The newsletter has come out in an excellent way!!
– Jayashree Murthy

Kampu is wonderful ! Vidya & Datta

Kampu has come out really well. It has given a new dimension to MKANT. I am sure this will create a great enthusiasm among our members and we should see more contributions.
-Sridhara Madhugiri

Just finished glancing at Kampu !! It's very nice with a lot of variety. My kids are already motivated to contribute something towards the Ugadi issue :) – Sandhya Honnavalli

Its very nice magazine, glad to read the kannada magazine after a long time. Looking forward for more aricles and story episodes. Great effort from MKANT. – Asha Vasu

Congratulations for the wonderful Publication "Kampu".All the articles are wonderful , interesting .Iam already looking fwrd for the Ugadi Newsletter. – Soumya Arun

Kampu looks big now .... so many are participating. A suggestion from me - a comment from the readers on the articles published on Kampu would have been so much good. May be that can be achieved online on the website. – Preeti Rao

The newsletter was very well laid out and I was happy to see kannada being used for most of the newsletter articles. Looking forward to future newsletters. - Panishayee

*ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ*

ಮುಖಪುಟ

# ಅಂದು, ಇಂದು, ಎಂದೆಂದೂ ಆಚರಿಸುವ "ಉಗಾದಿ"

-ಶ್ರೀಮತಿ ಸೀತಾ ಕೇಶವ, ಸಿಡ್ನಿ, ಆಸ್ಟ್ರೇಲಿಯ



ಸಮಸ್ತ ಬಂಧು, ಮಿತ್ರ ವರ್ಗದವರಿಗೆಲ್ಲಾ 'ಖರ' ನಾಮ ಸಂವತ್ಸರದ ಶುಭಾಶಯಗಳು.

ಚಾಂದ್ರಮಾನ 'ಉಗಾದಿ' ಹಬ್ಬ ಯಾವಾಗಲೂ ಮಾರ್ಚಿ ತಿಂಗಳ ಕೊನೆ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಬರುವುದು. ಸೌರಮಾನ ಉಗಾದಿ ಮಾತ್ರ ಏಪ್ರಿಲ್ 14ರಂದೇ ಬರುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ಹಿಂದೆ, ಅಂದರೆ ಸುಮಾರು 38 ವರ್ಷಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ಉಗಾದಿ ಹಬ್ಬ ಆಚರಿಸುತ್ತಿದ್ದುದ್ದನ್ನು ಓದುಗರಲ್ಲಿ ಹಂಚಿಕೊಳ್ಳಲು ಸಂತೋಷವಾಗುತ್ತಿದೆ.

ನಾವು ಆಸ್ಟ್ರೇಲಿಯಾಗೆ ಬಂದಾಗ ಭಾರತೀಯರು ವಲಸೆ ಬಂದಿದ್ದು ಬಹಳ ಅಲ್ಪ ಮಂದಿ. ಸಿಡ್ನಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಅಲ್ಲಲ್ಲಿ ಒಬ್ಬೊಬ್ಬ ಭಾರತೀಯರು ಇದ್ದಿದ್ದರೆ ಹೆಚ್ಚು! ನಾವಿದ್ದ 'ಕಂಟ್ರಿ ಟೌನ್', 'ಟಾರಿ' (ಸಿಡ್ನಿಗೆ 220ಕಿ.ಮೀ) ಊರಿನಲ್ಲಿ ನಾವಿಬ್ಬರೇ ಭಾರತೀಯರು. ಸುಮಾರು 6ತಿಂಗಳು ಪಾಶ್ಚಾತ್ಯರ ಜೊತೆ ಕಳೆದಿದ್ದೆವು. ಆಗತಾನೆ ತಂದೆ, ತಾಯಿ, ಬಂಧು, ಮಿತ್ರರನ್ನೆಲ್ಲಾ ಬಿಟ್ಟು ಬಂದಿದ್ದು; ಹಬ್ಬ ಬೇರೆ ಬಂತು; ಒಳಗೊಳಗೆ ಹೇಳಿಕೊಳ್ಳಲಾಗದ, ಒಂದು ತರಹದ ದುಃಖ, ಸಂತೋಷ ಒಟ್ಟೊಟ್ಟಿಗೆ! ಅದನ್ನೆಲ್ಲಾ ಬದಿಗಿಟ್ಟು ಮನಸ್ಸನ್ನೂ ಹಗುರಮಾಡಿಕೊಂಡು, ಬಾಗಿಲಿಗೆ 'ಕಣಿಗ್ಲೆ ಹೂವಿನ ಎಲೆಯನ್ನೆ ತಂದು ತೋರಣಕಟ್ಟಿ, ಮನೆಯವರು ಕಳುಹಿಸಿದ್ದ 'ಒಂಟಿಕೊಪ್ಪಲ್' ಪಂಚಾಂಗ ಇಟ್ಟು ಪೂಜೆಮಾಡಿ, ಹಬ್ಬದ ಅಡಿಗೆ, ಹೊಸ ಸೀರೆಉಟ್ಟು, ಊರಿನದೆಲ್ಲಾ ಮೆಲುಕು ಹಾಕುತ್ತಾ ಹಬ್ಬವಾಯಿತು. ತಿಳಿದಿದ್ದ ಕೆಲವು ಸ್ನೇಹಿತರುಗಳಿಗೆ ದೂರವಾಣಿ ಮೂಲಕ ಹಬ್ಬದ ಶುಭಾಶಯಗಳನ್ನು ಹೇಳಿ, ಮಾತನಾಡಿಕೊಂಡು ಹಬ್ಬ ಆಚರಿಸಿಕೊಂಡು ಬಂದೆವು.




ಶೀ ವೆಂಕಟೇಶ್ವರ ದೇವಾಲಯ, ಹೆಲೆನ್ಸ್ ಬರ್ಗ್ , ಆಸ್ಟೇಲಿಯ

ನಂತರ ಯಜಮಾನರಿಗೆ ಸಿಡ್ನಿಯ ಆಸ್ಪತ್ರೆಯಲ್ಲಿ ಕೆಲಸವಾಗಿ ಸಿಡ್ನಿಗೆ ಬಂದೆವು. ಇಲ್ಲಿ ಸಾಕಷ್ಟು ಜನ ಬೆಂಗಳೂರು, ಮೈಸೂರಿನಿಂದ ಬಂದವರ ಪರಿಚಯವಾಯಿತು. ಹಾಗೂ ಇಲ್ಲಿ ಎಲ್ಲಾ ಪದಾರ್ಥಗಳೂ ಸಿಕ್ಕುತ್ತಿತ್ತು. ಹೀಗಾಗಿ ಹಬ್ಬದ ಬದಲಾವಣೆ ಏನಪ್ಪಾ ಅಂದರೆ, ಮನೆಯ ಬಾಗಿಲಿಗೆ ಮಾವಿನಸೊಪ್ಪಿನ ತೋರಣ, ಹಾಗೂ ಇಲ್ಲಿ ನಮ್ಮ ದಿನಸಿ ಸಾಮಾನುಗಳಿಗೂ 20, 30ಕಿ.ಮೀಟರ್ ದೂರದ ಅಂಗಡಿಗೆ ಹೋಗಿ ಸಾಮಾನುತಂದು, ರುಚಿಕರವಾದ 'ಒಬ್ಬಟ್ಟು' ಮತ್ತು ನಮ್ಮ ಆಪ್ತ ಸ್ನೇಹಿತರ ಮನೆಯಲ್ಲಿ 'ಬೇವಿನಸೊಪ್ಪಿನ' ಮರವಿದ್ದು ಅಲ್ಲಿಂದ ತಪ್ಪದೇ ಬೇವಿನ ಸೊಪ್ಪು ತಂದು, ಬೇವು, ಬೆಲ್ಲ ಬೆರಸಿ ಸವಿದು ಹಬ್ಬವಾಗುತ್ತಿದೆ. ಇನ್ನು ಮಕ್ಕಳಾದ ಮೇಲೆ ಅವರಿಗೂ ಹಬ್ಬದ ವಿಶೇಷತೆ ತಿಳಿಸಿ, ಹೊಸಬಟ್ಟೆ ಹಾಕಿಕೊಳ್ಳುವುದರದ್ದು ಹೇಳಿದರೆ, ಸ್ಕೂಲಿನ ದಿವಸ ಹಬ್ಬ ಬಂದರೆ, ಯೂನಿಫಾರಂನಲ್ಲಿ ಹೋಗಲೇಬೇಕಾದ್ದರಿಂದ, ಬಂದ ತಕ್ಷಣ, ಕಾದಿದ್ದು 'ಹೊಸ ಬಟ್ಟೆ ಏನು ತಂದಿದೀಯಾ?' ಎಂದು ಕೇಳಿ ಹಾಕಿಕೊಂಡು ಸಂತೋಷಪಡುತ್ತಿದ್ದರು. ಆದರೆ ಬೇವು, ಬೆಲ್ಲ ತಿನ್ನುವಾಗಿನ 'ದೃಶ್ಯವೇ' ಬೇರೆ!!


ಸಿಡ್ನಿಗೆ 54ಕಿ.ಮಿ ದೂರದ ಹೆಲೆನ್ಸ್ ಬರ್ಗ್ ಊರಿನಲ್ಲಿ 1985ರಲ್ಲಿ ಸೌತ್ ಈಸ್ಟ್ ಏಷ್ಯಾಕ್ಕೆ ಅತಿ ದೊಡ್ಡದಾದ ಶ್ರೀ ವೆಂಕಟೇಶ್ವರ ದೇವಸ್ಥಾನ ನಿರ್ಮಾಣವಾಯಿತು. ಹೀಗಾಗಿ ಹಬ್ಬದ ದಿವಸಗಳಲ್ಲಿ ದೇವಸ್ಥಾನಕ್ಕೂ ಹೋಗುವುದು ರೂಢಿಯಾಯಿತು.
ಈಗ ಸುಮಾರು ಹತ್ತು ವರ್ಷಗಳಿಂದ ಸಾಕಷ್ಟು ಕನ್ನಡಿಗರೂ ವಲಸೆ ಬಂದಿರುವುದರಿಂದ, ಕನ್ನಡಿಗರೆಲ್ಲಾ ಒಟ್ಟುಗೂಡಿ, ದೇವಸ್ಥಾನದ ಕಟ್ಟಡಕ್ಕೂ ಅನುಕೂಲವಾಗಲೆಂದು ದೇವಸ್ಥಾನದಲ್ಲಿ ಉಗಾದಿ ಹಬ್ಬ ಬಹಳ ವಿಜೃಂಭಣೆಯಿಂದ ಆಚರಿಸುತ್ತಿರುವೆವು. ಎಲ್ಲೆಲ್ಲಿ ನೋಡಿದರೂ, ಬಗೆಬಗೆಯ ಬಣ್ಣ ಬಣ್ಣದ, ಕುರ್ತಾ ಪೈಜಾಮ, ಕಂಚಿ, ಮೈಸೂರು ಸಿಲ್ಕ್ , ಪಾರ್ಟಿ ಸೀರೆಗಳು, ಪಂಚೆ, ಶಲ್ಯ, ಮಗುಟಗಳೂ ಮಿಂಚಿ ಮಿರುಗುತ್ತಿದ್ದು ಹಬ್ಬದ ಕಳೆ ಕಟ್ಟಿತ್ತು. ಸೇರಿದ್ದವರೆಲ್ಲಾ ಉಗಾದಿ ಶುಭಾಶಯಗಳನ್ನೂ ಪರಸ್ಪರ ಹಂಚಿಕೊಳ್ಳುತ್ತಿದ್ದರ ಸಂಭ್ರಮ ಹೇಳಲುತೀರದು!! ಮತ್ತು ಮಕ್ಕಳ ಮನೆಗಳಿಗೆ ತಂದೆ, ತಾಯಿಯರು ಬಂದಿದ್ದರೆ ಅವರುಗಳ ಪರಿಚಯ ಮಾಡಿಕೊಳ್ಳುವುದಕ್ಕೂ ಅನುಕೂಲವಾಯಿತು. ಆ ದಿವಸ ದೇವರಿಗೆ ಅಭಿಷೇಕವಾದನಂತರ, ಪಂಚಾಂಗ ಶ್ರವಣ-ಪಠಣ, ತೀರ್ಥ-ಪ್ರಸಾದ, ಬೇವು-ಬೆಲ್ಲ ಹಂಚಿ, ಭಕ್ತಾದಿಗಳಿಂದ ದೇವರನಾಮಗಳನ್ನು ಹಾಡಿಸಿ, ಮಹಾಪ್ರಸಾದ ಹಬ್ಬದ ಊಟದ ವ್ಯವಸ್ಥೆ ಮಾಡುತ್ತಿರುವೆವು. ದೇವಸ್ಥಾನದ ಅಭಿವೃದ್ಧಿಗೂ ಅನುಕೂಲವಾಗಲೆಂದು ಭಕ್ತಾದಿಗಳ ಸಂಸಾರಕ್ಕೆ 20 ಡಾಲರುಗಳು ಹುಂಡಿಗೆ ಕಾಣಿಕೆ ಹಾಕುವ ಹಾಗೆ ಮಾಡಿರುವೆವು.

ಹೋದ ವರ್ಷ ದೇವಸ್ಥಾನಕ್ಕೆ "ಬೆಳ್ಳಿಹಬ್ಬ" ವಾಯಿತು. ಹೀಗಾಗಿ ಅಕ್ಟೋಬರ್ 9ನೇ ತಾರೀಖಿನಿಂದ ಹತ್ತು ದಿವಸಗಳು 'ಬ್ರಹ್ಮೋತ್ಸವ' ವೂ ಬಹಳ 'ಭರ್ಜರಿಯಾಗಿ' ನಡೆಯಿತು. ಪ್ರತಿ ದಿವಸ ಸಾವಿರಾರು ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದು, ತೃಪ್ತಿಪಟ್ಟಿದ್ದು ತಿಳಿಸಲು ತುಂಬಾ ಹೆಮ್ಮೆಯಾಗಿರುವುದು. ಈಚೀಚೆಗಂತೂ ದೇವರ ಸನ್ನಿಧಿಯಲ್ಲಿ, ಮದುವೆ, ಮುಂಜಿ ಮತ್ತು ವಿಶೇಷ ಸಮಾರಂಭಗಳೂ ಆಗಾಗ್ಗೆ ನಡೆಯುತ್ತಲೇ ಇರುವುದು. ಹೇಳಬೇಕೆಂದರೆ ಆ ದಿವಸ ಸೇರಿದ್ದ ಅನೇಕ ಹಿರಿಯರ ಬಾಯಿಂದ, 'ತಾಯ್ನಾಡಿಗಿಂತ' ಇಲ್ಲಿಯೇ ಬಹಳ ಸಾಂಪ್ರದಾಯಕವಾಗಿ ಪೂಜೆ, ಪುನಸ್ಕಾರ, ಹವನ, ಹೋಮಗಳು ನಡೆಯುತ್ತಲೇ ಇದ್ದು, ಅಲ್ಲಿ ಕಡಿಮೆಯಾಗುತ್ತಿರುವುದೆಂದು ತಮ್ಮ ಅಭಿಪ್ರಾಯ ತಿಳಿಸುತ್ತಿದ್ದರು. ಅಂದಮೇಲೆ, ಅಂದಿನ ದಿವಸಗಳಿಗೂ, ಮಧ್ಯಂತರ ದಿವಸಗಳಲ್ಲೂ ಹಬ್ಬ ಹರಿದಿನ ಆಚರಿಸುತ್ತಿದ್ದು ನೋಡಿದರೆ, ಇಂದಿನ ಪೀಳಿಗೆಯವರಿಗೂ ಬಹಳ ಅನುಕೂಲವಾಗಿ, ನಮ್ಮ ಸಂಸ್ಕೃತಿ, ಸಂಪ್ರದಾಯ, ಶಾಶ್ವತವಾಗಿ ಉಳಿಸಿ, ಬೆಳೆಸಿಕೊಳ್ಳುವುದರಲ್ಲಿ, ಆತಂಕ, ಆಶ್ಚರ್ಯ, ಅನುಮಾನಕ್ಕೆ ಆಸ್ಪದವೇ ಇಲ್ಲವೆನಿಸುತ್ತೆ!!

ಟೀಕೆ - ಟಿಪ್ಪಣಿ

# ಜಾಗರಕ್ಕೊಂದು ಘಳಿಗೆ

- ಗುರುಪ್ರಸಾದ್ ಕಾಗಿನೆಲೆ, Minnesota



***ಬೆ***ಳಿಗ್ಗೆ ಐದುಗಂಟೆ. ಚಂದ್ರ ಹೋಗಲು ಸೂರ್ಯ ಬರಲು ಹೆದರುವ ಸಮಯ. ಒಂದು ಟ್ಯಾಕ್ಸಿ ಆಸ್ಪತ್ರೆಯ ಮುಂದೆ ನಿಲ್ಲುತ್ತದೆ. ಆಕೆ ಇಳಿಯುತ್ತಾಳೆ. ನಿಧಾನವಾಗಿ ನಡೆದು ಬಂದು ಟ್ರಯಾಜ್ನ ಏರಿಯಾದಲ್ಲಿ ಕೂತು 'ಏನು ಸಮಸ್ಯೆ?' ಎಂದು ನರ್ಸು ಸೂಸನ್ ಕೇಳುವ ಪ್ರಶ್ನೆಗೆ 'ಹೊಟ್ಟೆಯಲ್ಲಿ ಗ್ಯಾಸ್ ಆಗಿದೆ' ಎನ್ನುತ್ತಾಳೆ.

ಸುಮಾರು ಎಂಬತ್ತೆಂಟು ವರ್ಷ ವಯಸ್ಸು, ಬೆಳ್ಳಗೆ ಕೂದಲು ಮಿಂಚುತ್ತಿದೆ. ಬೆನ್ನು ಬಾಗಿದೆ. ಕಟ್ಟಿದ ಹಲ್ಲಿನ ಸಂದಿ ಕೂಡ ನೀಟಾಗಿದೆ. ಒಂದು ಸಣ್ಣ ಸ್ವೆಟರ್ ಮತ್ತು ನೀಲಿ ಪ್ಯಾಂಟನ್ನು ತೊಟ್ಟಿದ್ದಾಳೆ. ಶೂ ಮಿರಿಮಿರಿ ಹೊಳೆಯುತ್ತಿದೆ.

ಆಕೆ ಎದ್ದು ಡ್ರೆಸ್ ಮಾಡಿಕೊಂಡು ಆಸ್ಪತ್ರೆಗೆ ಟ್ಯಾಕ್ಸಿಯನ್ನು ಹಿಡಿದು ಬರಲು ಕನಿಷ್ಠ ಎರಡು ಗಂಟೆಯಾದರೂ ಬೇಕಾಗಿರಬಹುದು,  'ಎಷ್ಟು ದಿನದಿಂದ?' ಸೂಸನ್‌ಳ ಪ್ರಶ್ನೆಗೆ ಆಕೆ ಮೆದುದನಿಯಲ್ಲಿ ಹೇಳುತ್ತಾಳೆ.' ಹೆಚ್ಚೇನಿಲ್ಲ. ರಾತ್ರಿ ಎರಡುಗಂಟೆಗೆ ಎಚ್ಚರವಾಯಿತು. ನಿದ್ದೆ ಬರಲಿಲ್ಲ.'

ಮಾತಾಡಿದಾಗ ಗಲ್ಲದ ಚರ್ಮ ಗಲಗಲ ಅಲ್ಲಾಡುತ್ತದೆ' '.ಸರಿ, ಎದೆನೋವಿದೆಯಾ?' ಎಂದು ಕೇಳಿದಾಗ 'ಇಲ್ಲ' ಎಂದು ಒಂದೇ ಪದದ ಉತ್ತರ ಕೊಡುತ್ತಾಳೆ .ಆಸ್ಪತ್ರೆಯ ಪ್ರಾಶ್ನಿಕದಲ್ಲಿನ ಎಲ್ಲ ಪ್ರಶ್ನೆಗಳಿಗೂ ಆಕೆಯ ಉತ್ತರ ಒಂದೇ 'ಇಲ್ಲ'. ಎಂಭತ್ತೆಂಟು ವರ್ಷ ವಯಸ್ಸು .ಬೀಪಿ, ಡಯಾಬಿಟೀಸ್, ಆರ್ಥ್ರೈಟಿಸ್ ಎಂತವೂ ಇಲ್ಲ' .ಬರೇ ಗ್ಯಾಸ್' ಎಂದು ಹೇಳುತ್ತಾಳೆ .ಯಾವ ಧಾವಂತವೂ ಇಲ್ಲದೇ ನಿಧಾನವಾಗಿ ತನ್ನ ಪರ್ಸಿನಿಂದ ಒಂದು ಸಣ್ಣ ಡೈರಿಯನ್ನು ತೆಗೆಯುತ್ತಾಳೆ .ತಾನು ಹಿಂದಿನ ದಿನ ತಿಂದ ಊಟ, ಮಲ್ಟಿವಿಟಮಿನ್ ಮಾತ್ರೆಗಳು ಮತ್ತು ಪ್ರತಿಯೊಂದನ್ನೂ ತೆಗೆದುಕೊಂಡ ಸಮಯವನ್ನು ಕೂಡ ನಿಖರವಾಗಿ ಬರೆದಿದ್ದಾಳೆ .ಸೂಸನ್ ನನ್ನ ಹತ್ತಿರ ಬಂದು 'ಈಕೆ ನಿಜವಾಗಿಯೂ ಸ್ವೀಟ್ಹಾರ್ಟ್' ಎನ್ನುತ್ತಾಳೆ .ಮತ್ತು 'ಆಕೆಗೆ ಬರೇ ಗ್ಯಾಸ್ ಅಂತೆ' ಎಂದು ಕಣ್ಣು ಹೊಡೆಯುತ್ತಾಳೆ.

ಎಮರ್ಜೆನ್ಸಿ ರೂಮಿನ ತುಂಬ ಎದೆನೋವು, ಸ್ಟ್ರೋಕು, ಕೈಕಾಲು ಮುರಿದಿರುವವರು, ಕುಡುಕರು, ಬಸುರಿಯರು ಎಲ್ಲರೂ ತುಂಬಿದ್ದಾರೆ .ರಚ್ಚೆಹಿಡಿದು ಅಳುವ ಮಗುವನ್ನು ಸಮಾಧಾನಮಾಡಲು ಆಗದೇ ಹದಿವಯಸ್ಸಿನ ತಾಯಿಯೊಬ್ಬಳು ತಾನೂ ಅಳಲು ಶುರುಮಾಡಿದ್ದಾಳೆ .ಹಿಂದಿನ ವಾರ ಚುಚ್ಚಿಸಿಕೊಂಡ ಕಿವಿಯ ರಿಂಗು ನಂಜಾಗಿದೆಯೆಂದು ಹದಿನಾರರ ಹುಡುಗನೊಬ್ಬ ಗಲಾಟೆಮಾಡುತ್ತಿದ್ದಾನೆ .ಎಲ್ಲರನ್ನೂ ಸುಧಾರಿಸಿಕೊಂಡು ಬರುತ್ತಿರುವ ನಿದ್ರೆಯನ್ನು ತಡೆದು, ಇನ್ನೊಂದೆರಡು ಕಪ್ಪು ಕಾಫಿ ಕುಡಿದು ಇನ್ನು ಮೂರು ಗಂಟೆ ಕಳೆದರೆ ಸಾಕೆನಿಸಿ ಕೆಲಸ ಮುಂದುವರೆಸುತ್ತೇನೆ.

ಬಾಗಿಲಿನ ಮುಂದೆ ಒಂದು ಹಾರ್ಲಿ ಡೇವಿಡ್ಸನ್ ನಿಲ್ಲುತ್ತದೆ .ತಲೆಗೆ ಒಂದು ಕಪ್ಪುಬಿಳಿಯ ಬಾಂಡ್ಯಾನ, ಲೆದರ್ ಜ್ಯಾಕೆಟ್, ಬಿಳೀ ಗಡ್ಡ, ಕಾಣುತ್ತಿರುವ ಕುತ್ತಿಗೆಯ ತುಂಬಾ ಹಚ್ಚೆಯಿದೆ .ಸುಮಾರು ಆರೂವರೆ ಅಡಿ, ಮುನ್ನೂರು ಪೌಂಡಿದ್ದಾನೆ .ಬಂದು ಟ್ರಯಾಜ್ನಲ್ಲಿ ಕೂರುತ್ತಾನೆ .ನರ್ಸು 'ಏನಾಗಿದೆ?' ಎಂದು ಕೇಳಿದಾಗ ತನ್ನ ಜಾಕೆಟ್ಟನ್ನು ಬಿಚ್ಚಿ ತೋರಿಸುತ್ತಾನೆ .ಮೊಳಕೈಮೇಲೆ ಒಂದು ಆರಿಂಚಿನ ಆಳವಾದ ಗಾಯವಿದೆ .ಸೂಜಿ ಪ್ರಶ್ನಾರ್ಥಕವಾಗಿ ನೋಡುತ್ತಾಳೆ' .ಚೈನ್ ಸಾ .ಮನೆಯ ಗರಾಜಿನಲ್ಲಿ ಮರಗೆಲಸ ಮಾಡುತ್ತಿದ್ದೆ .ಎಫ್ಫಿಂಗ್ ಮರದ ಪೀಸು ನೋಡೋಕೆ ಮುಚೆಯೇ ಕರಕ್ಕಂತ ಕತ್ತರಿಸಿಹೋಯಿತು .ಸಾ ವಾಪಸ್ ಬಂದು ನನ್ನ ಎಫ್ಫಿಂಗ್ ಮೊಳಕೈಗೆ ಬಡೀತು … ಎಫ್ಫಿಟ್.. .ಪಾರ್ಡನ್ ಮೈ ಫ್ರೆಂಚ್' ಎಂದ .

ಸೂಸನ್ 'ಓಕೇ, ಒಂದು ನಿಮಿಷ..ಈಗ ನೀನು ಬಂದ ಟೈಮನ್ನು ಸರಿಯಾಗಿ ಬರಕೋತೇನೆ. ಈಗ ಬೆಳಿಗ್ಗೆ ಐದೂಮೂವತ್ತಾಐದು' ಎನ್ನುತ್ತಾಳೆ, ರಾಗವಾಗಿ.  'ಈ ಸಮಯದಲ್ಲಿ ಯಾಕೆ ಮರಗೆಲಸ ಮಾಡ್ತಾ ಇದ್ದೆ ಅಂತ ಅಂತ ನೇರವಾಗಿ ಕೇಳೋಕಾಗಲ್ವ ನಿಂಗೆ?' ಅಂದ, ಆಕೆಯನ್ನು ದುರುಗುಟ್ಟಿ ನೋಡುತ್ತಾ.

'ಇಲ್ಲ. ಅದು ನನ್ನ ಉದ್ದೇಶ ಅಲ್ಲ. ನೀನು ಆಸ್ಪತ್ರೆಗೆ ಬಂದಿರೋ ಸಮಯವನ್ನು ನಾನು ಸರಿಯಾಗಿ ಬರಕೋಬೇಕು. ಫಾರ್ ದ ರೆಕಾರ್ಡ್' ಎಂದು ಹೇಳುತ್ತಾಳೆ.  ಮತ್ತೆ ಕೊಂಚ ಆತ ಸೆಟಲ್ ಆಗೋಕೆ ಬಿಟ್ಟು 'ನಿನ್ನ ಇನ್ಸುರೆನ್ಸ್ ಇತ್ಯಾದಿ ವಿವರಗಳು ಬೇಕಿತ್ತಲ್ಲ?' ಎಂದು ಬಹಳ ಮೆದುವಾಗಿ ಕೇಳುತ್ತಾಳೆ.' ಐ ಡೋಂಟ್ ಹ್ಯಾವ್ ಅನಿ ಎಫ್ಫಿಂಗ್ ಇನ್ಶ್ಯುರೆನ್ಸ್. ನನ್ನ ಕೆಲಸ ಹೋಯಿತು' ಅನ್ನುತ್ತಾನೆ.' ಹೋಗಲಿ ಸರಕಾರೀ ಪ್ರೋಗ್ರಾಮುಗಳಿವೆ. ಅದಕ್ಕೆ ಅಪ್ಲೈ ಮಾಡಬಹುದಲ್ಲವಾ?' ಎಂದು ಒಂದು ಫಾರ್ಮ್ ತೆಗೆದುಕೊಡುತ್ತಾಳೆ. ಅವನ ಗುರುತಿನ ಚೀಟಿ ಕೇಳಿದಾಗ ಅವನ ಜೇಬಿನಿಂದ ಒಂದು ಬಟನ್ ಚಾಕು, ಎರಡು ಮಾರ್ಲ್ಬರೋ ಪ್ಯಾಕು, ಒಂದು ಲೈಟರ್ ಮತ್ತು ಸೆಲ್ಫೋನ್ ನಂತರ ಒಂದು ಮಾಸಿದ ಚಿತ್ರವಿರುವ ಐಡಿ ಹೊರಗೆ ಬರುತ್ತದೆ. ಸೂಸನ್ ಕೊಟ್ಟ ಫಾರ್ಮ್ ಅನ್ನು ಬಹಳ ಅಲಕ್ಷ್ಯದಿಂದ ತೆಗೆದುಕೊಳ್ಳುತ್ತಾನೆ. ಅವನಿಗೆ ಅವನ ರೂಮಿನೊಳಗೆ ಕರಕೊಂಡು ಹೋಗಬೇಕಾದರೆ 'ಟೆಲ್ ಯುವರ್ ಡಾಕ್ ಟು ಹರಿ ಅಪ್. ನನಗೆ ಜೀವಮಾನ ಪರ್ಯಂತ ಈ ಎಮರ್ಜೆನ್ಸಿ ರೂಮಿನಲ್ಲಿರೋಕೆ ಟೈಮಿಲ್ಲ' ಅಂತಾನೆ.

ಜಗಳವಾಡಲೂ ಸಮಯವಿಲ್ಲ ಈತನ ಜತೆ .ಈ ಹೊಲಿಗೆ ಹಾಕುವುದು ನನಗೆ ನನ್ನ ಕೆಲಸದಲ್ಲಿ ಒಂದು ರೀತಿ ಬ್ರೇಕ್ ಇದ್ದಂತೆ.ಅರ್ಧಗಂಟೆ ಒಂದೇ ರೂಮಿನೊಳಗೆ ಒಂದೇ ಪೇಷೆಂಟನ್ನು ನೋಡುತ್ತಾ ಒಂದು ಕುರ್ಚಿಯನ್ನು ಎಳಕೊಂಡು ಕೂತು ಬೇಕಿದ್ದರೆ ಹರಟೆ ಹೊಡಕೊಂಡು ಪ್ರತಿ ಹದಿನೈದು ಸೆಕಂಡಿಗೊಮ್ಮೆ ಬೇರೆ ಬೇರೆ ರೋಗಿಗಳನ್ನು ನೋಡಲೇಬೇಕಾದ ಯಾವ ಆತಂಕವೂ ಇಲ್ಲದೇ ನಿಶ್ಚಿಂತೆಯಾಗಿ ಕೂರಬಹುದು .ಕೆಲವೊಮ್ಮೆ ನಾನು ಹೀಗೆ ಯಾರಿಗಾದರೂ ಹೊಲಿಗೆ ಹಾಕಬೇಕಾದರೆ ಆ ರೂಮಿನ ಬಾಗಿಲು ಹಾಕಿಕೊಂಡುಬಿಡುತ್ತೇನೆ, ಒಳಗೆ ರೂಮಿನಲ್ಲಿ ಟೀವಿಯೇನಾದರೂ ಇದ್ದಲ್ಲಿ ನಾನೇ ರೋಗಿಗೆ ಟೀವಿ ಹಾಕಿಕೋ ಎಂದು ಪ್ರೋತ್ಸಾಹಿಸುತ್ತೇನೆ, ಕೂಡ .ಇದೊಂದು ತರ ನನಗೆ ಸಿಕ್ಕೂ ಸಿಕ್ಕದ ವಿರಾಮ .ದೇಹ ದಣಿದಿರುತ್ತದೆ .ಆದರೆ ಯೋಚನೆ ಮಾಡುವ ಗೋಜಿಲ್ಲ .ಸುಮ್ಮನೆ ಕೈಕೆಲಸ.ಸರಿ, ನಮ್ಮ ಹಾರ್ಲಿ ಡೇವಿಡ್ಸನ್ ಅನ್ನೂ ಒಂದು ರೂಮಿನಲ್ಲಿ ಹಾಕಿಕೊಳ್ಳುತ್ತೇನೆ.

ಇಂಥವರ ಜತೆ ನೇರವಾಗಿ ಬಾಂಡಿಂಗ್ ಮಾಡಿಕೊಳ್ಳಲು ಇರೋ ಒಂದೇ ಉಪಾಯವನ್ನು ನನಗೆ ಈ ಕೆಲಸ ಕಲಿಸಿದೆ .ಬಾಗಿಲು ಹಾಕಿ ಅವನ ಗಾಯವನ್ನು ಪರೀಕ್ಷಿಸುತ್ತಾ 'ಓಯ್ ಬಡ್ಡಿ . ದಿಸ್ ಈಸ್ ಎಫ್ಫಿಂಗ್ ಡೀಪ್' ಅನ್ನುತ್ತೇನೆ .ಅವನನ್ನು ನನ್ನ ಅಂಕದೊಳಗೆ ಬಿಟ್ಟುಕೊಳ್ಳುವ ಪ್ರಶ್ನೆಯೇ ಇಲ್ಲ .ನೇರವಾಗಿ ನಾನೇ ಅವನ ಅಂಕಕ್ಕೆ ಹೋಗುವುದು .ಹನಿ, ಎಫ್ ಇಟ್, ಸನ್ನೈನ್, ಹೆಲ್, ಬಡಿ, ಫ್ರೆಂಡ್, ಯೋ ಈ ಪದಗಳು ಅವರವರ ಅಂಕದೊಳಗೆ ಅಂಚುದಾಟಲು ಯಾವಾಗಲೂ ನನ್ನ ಬೆಂಗಾವಲಾಗಿ ನಿಂತಿವೆ .ಈ ಎಫ್ ಅನ್ನುವ ಅವಾಚ್ಯದ ಅಪಭ್ರಂಶ ನನಗೆ ಹೌ ಅರ್ ಯು ಅನ್ನುವಷ್ಟೇ ಪರಿಚಿತವಾದದ್ದು ಅನ್ನುವಂತೆ ನಟಿಸುತ್ತೇನೆ . ನಿಧಾನವಾಗಿ ಅವನ ಗಾಯವನ್ನು ನೋಡುತ್ತೇನೆ .ಯಾವುದೋ ಹೆಣ್ಣಿನ ಹಚ್ಚೆಯ ಗುರುತಿರುವ ಅವನ ಮುಂಗೈ ಹರಿದಿದೆ' .ಈ ಹಚ್ಚೆಗೆ ಮೂವತ್ತೈದು ಡಾಲರ್ ಕೊಟ್ಟಿದ್ದೇನೆ . ಮತ್ತೆ ಮೂರುಗಂಟೆ ಕೂತು ನೋವು ಅನುಭವಿಸಿದ್ದೇನೆ .

ನನ್ನ ಗರ್ಲ್ಫ್ರೆಂಡಿಗೆ ಬಹಳ ಇಷ್ಟವಾದದ್ದಿದು .ಯು ಬೆಟರ್ ಮೇಕ್ ಶ್ಯೂರ್ ದಟ್ ದೇರ್ ಈಸ್ ನೋ ಸ್ಕಾರ್ ಆನ್ ಹರ್' ಎನ್ನುತ್ತಾನೆ .ಅವನ ತೋಳಿನ ಮೇಲಿನ ಸುಂದರಿಯ ಮೈಮೇಲೆ ಒಂದೂ ಗುರುತಿರದ ಹಾಗೆ ರಿಪೇರಿ ಮಾಡುವುದು ಹೇಗೆ .
ನಾನು ಕೈಗವುಸನ್ನು ಬಿಚ್ಚುತ್ತಾ ಹೇಳುತ್ತೇನೆ 'ನಿನಗೆ ಬೇಕಾಗಿರೋದು ಎಮರ್ಜೆನ್ಸಿ ಡಾಕ್ಟರಲ್ಲ .ಪ್ಲಾಸ್ಟಿಕ್ ಸರ್ಜನ್ ಅಥವಾ ಇನ್ನೊಬ್ಬ ಹಚ್ಚೆ ಹಾಕೋವನು .ಬೇಕಾದರೆ ನಾನು ರೆಫರೆನ್ಸ್ ಕೊಡುತ್ತೇನೆ '.ನಾನು ನನ್ನ ಕೆಲಸದಿಂದ ಇಷ್ಟು ಸುಲಭವಾಗಿ ತಪ್ಪಿಸಿಕೊಳ್ಳುತ್ತಿರುವುದು ಹಾರ್ಲಿ ಡೇವಿಡ್ಸನ್ಗೆ ಇಷ್ಟವಾಗುವುದಿಲ್ಲ' .ಜಸ್ಟ್ ಎಫ್ಫಿಂಗ್ ಡೂ ಇಟ್' ಎಂದು ಕೂಗುತ್ತಾನೆ.

ಪಕ್ಕದ ರೂಮಿನಲ್ಲಿದ್ದ ಮಗು ಜೋರಾಗಿ ಅಳಲು ಶುರುಮಾಡುತ್ತದೆ.' ಮೈಂಡ್ ಯುವರ್ ಲಾಂಗ್ವೇಜ್ ಬಡಿ, ಇಲ್ಲಿ ಹೆಂಗಸರು, ಮಕ್ಕಳಿದ್ದಾರೆ. 'ಅನ್ನುತ್ತೇನೆ.' ಡು ಯು ಥಿಂಕ್ ಐ ಕೇರ್' ಎನ್ನುತ್ತಾನೆ. ಓಕೆ ಅಂದು ಕೈಯನ್ನು ಮರಗಟ್ಟಿಸುವ ಔಷಧಿಯನ್ನು ಅವನ ಸುಂದರಿಯ ವಿವಿಧ ಭಾಗಕ್ಕೆ ಚುಚ್ಚುತ್ತಾ ಹೋಗುತ್ತೇನೆ.' ವೋವ್, ವೋವ್ ಡಾಕ್' ಅನ್ನುತ್ತಾ ಕೂಗುತ್ತಾನೆ. ಹುಲಿಗೆ ಸೂಜಿಯೆಂದರೆ ಭಯವಂತೆ. ಕೊಂಚ ನಿಧಾನಿಸುತ್ತೇನೆ.

ಟೀವಿ ಹಾಕುತ್ತಾನೆ. ಯಾವುದೋ ಡಬ್ಲ್ಯುಡಬ್ಲ್ಯುಎಫ್ನ ಹಳೆಯ ರೆಸ್ಲಿಂಗ್ ಶೋ ನೋಡಹತ್ತಿದ್ದಾನೆ. ನಾನು ಅವನ ಸುಂದರಿಯನ್ನು ಸರಿಮಾಡಲು ಕೂರುತ್ತೇನೆ. ಅರ್ಧಗಂಟೆಯ ಕೆಲಸದ ನಂತರ ಸುಂದರಿ ಮತ್ತೆ ಸುಂದರವಾಗಿದ್ದಾಳೆ. ಜರಾಸಂಧನಂತೆ ಮಧ್ಯೆ ಸೀಳಿದ್ದ ಅವಳ ಮೈ ಒಂದು ದೃಷ್ಟಿಬೆಟ್ಟಿನಂಥಾ ಗುರುತಿನ ಜತೆಗೂ ಸರಿಹೋಗುತ್ತಾಳೆ ಎಂದು ನಾನು ಅವನಿಗೆ ಹೇಳುತ್ತೇನೆ. ಅಷ್ಟುಹೊತ್ತಿಗೆ ಆತ ಗೊರಕೆ ಹೊಡೆಯುತ್ತಿದ್ದಾನೆ.

ಪಕ್ಕದ ರೂಮಿಗೆ ಹೋಗುತ್ತೇನೆ .ಸೂಸನ್ಳ ಸ್ವೀಟ್ಹಾರ್ಟನ್ನು ಕಾಯಿಸಿದಕ್ಕಾಗಿ ಕ್ಷಮೆಕೋರಿ ಅವಳ ಗ್ಯಾಸ್ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಮಾಡೋಣ ಅಂದುಕೊಳ್ಳುತ್ತೇನೆ .ಒಳಗೆ ಹೋದರೆ ಆಕೆ ಕೂತು ತನ್ನ ಬೆಳಗಿನ ಉಪಾಹಾರವನ್ನು ಮುಗಿಸಿದ್ದಾಳೆ .ಅನ್ನಪೂರ್ಣೇಶ್ವರಿ ಸೂಸನ್ ಅವಳಿಗೆ ತಾಜಾ ಪೀನಟ್ ಬಟರ್ ಟೋಸ್ಟು, , ಕಿತ್ತಳೆ ರಸ ಮತ್ತು ಕಾಫಿಯನ್ನು ಕೊಟ್ಟಿದ್ದಾಳೆ .ಆಕೆ ಕುಡಿದು ಸಂತೋಷದಿಂದ ಮನೆಗೆ ಹೋಗಲು ಸಿದ್ಧಳಾಗಿದಾಳೆ .ನಾನು ಮಾತಾಡಿಸಹೋದಾಗ 'ನೀನು ತುಂಬಾ ಬಿಜಿ ಇದ್ದೀಯ .ನನಗೆ ಎಲ್ಲ ಸರಿಹೋಯ್ತು' ಎನ್ನುತ್ತಾಳೆ .ನಾನು ಆಕೆಯನ್ನು ಕೇಳುತ್ತೇನೆ' .ನೀನು ತಪ್ಪು ತಿಳಿಯದಿದ್ದರೆ ನಿನಗೆ ಒಂದು ಪ್ರಶ್ನೆ ಕೇಳಲಾ . ನೀನು ಎಮರ್ಜೆನ್ಸಿ ರೂಮಿಗೆ ಬಂದದ್ದೇಕೆ?'

'ಗ್ಯಾಸ್ ಆದರೆ ಬಹಳ ಕಷ್ಟ ಡಾಕ್ಟರ್ .ನಾನು ಒಬ್ಬಳೇ ಮನೇಲಿ ಇರ್ತೇನೆ . ಆಮೇಲೆ ಹೆಚ್ಚು ಕಮ್ಮಿಯಾಗಿಬಿಟ್ಟರೆ?' ಅವಳ ಮುಖದಲ್ಲಿ ನಿಜವಾದ ಆತಂಕವಿದೆ .ಮತ್ತೆ ಹೇಳುವುದನ್ನು ಮುಂದುವರೆಸುತ್ತಾಳೆ' .ನನ್ನ ಗೆಳತಿಯೊಬ್ಬಳಿದ್ದಳು .ಆಕೆಗೆ ಹಿಂಗೆ ಹೊಟ್ಟೆನೋವು ಬಂದು ಹಾಗೇ ಅದನ್ನು ಅವಳು ಸುಮ್ಮನೆ ಅಲಕ್ಷ್ಯಿಸಿದ್ದಳು .ಆರೇ ತಿಂಗಳಲ್ಲಿ ಸತ್ತೇ ಹೋದಳು '.ಎನ್ನುತ್ತಾಳೆ.

ನಾನು ಮತ್ತೆ ನಗುತ್ತೇನೆ .ಆ ಮುದುಕಿಯ ಕೈಹಿಡಿದು 'ನಮ್ಮ ಉಪಾಹಾರ ಇಷ್ಟವಾಯಿತಾ?' ಎಂದು ಕೇಳುತ್ತೇನೆ' .ನಾನು ಹೊಟ್ಟೆ ತುಂಬಾ ತಿನ್ನುತ್ತೇನೆ, ಕಣ್ಣುತುಂಬಾ ನಿದ್ದೆ ಮಾಡುತ್ತೇನೆ'. ಅನ್ನುತ್ತಾಳೆ .ನನ್ನ ಧ್ವನಿಯಲ್ಲಿ ಕುಹಕವೇನಾದರೂ ಇತ್ತಾ ಎಂದು ನನಗೇ ಅನುಮಾನ ಬರುತ್ತದೆ .ಮತ್ತೆ ಹತ್ತಿರ ಬಂದು 'ಈಗ ಮೂರುವರ್ಷಗಳಿಂದ ಕಣ್ಣು ಕಾಣುತ್ತಿಲ್ಲ .ಆದ್ದರಿಂದ ಡ್ರೈವ್ ಮಾಡೋಹಾಗಿಲ್ಲ .ಅಡಿಗೇನೂ ಚೆನ್ನಾಗಿ ಮಾಡೋಕೆ ಬರೋದಿಲ್ಲ '.ಎನ್ನುತ್ತಾಳೆ .ಹಾಗೇ ಸೂಸನ್ಳನ್ನು ನೋಡಿ 'ನಿಮ್ಮಾಸ್ಪತ್ರೇಲಿ ಮನೇಗೆ ಊಟ ಕಳೀಸೋ ವ್ಯವಸ್ಥೆ ಇದೆಯಂತೆ ಹೌದಾ' ಎಂದು ಕೇಳಿದಾಗ ಸೂಸನ್ 'ಹೌದು' ಎಂದು ಹೇಳಿ ಆಸ್ಪತ್ರೆಯ ಫುಡ್ಸ್ಟ್ಯಾಂಪುಗಳನ್ನು ಕೊಡುತ್ತಾಳೆ . 'ಗಾಡ್ ಬ್ಲೆಸ್ ಯು' ಎಂದು ಹೋಗಿ ನಿರೀಕ್ಷಣಾ ಕೊಠಡಿಯಲ್ಲಿ ಟ್ಯಾಕ್ಸಿಗಾಗಿ ಕಾಯುತ್ತಾ ಕೂರುತ್ತಾಳೆ .

ಹೆಲಿಕಾಪ್ಟರ್ ಬಂದಿದೆ .ಹಾರ್ಟ್ ಅಟ್ಯಾಕ್ ಆದವನು ಈಗ ಪರವಾಗಿಲ್ಲ . ಆತನಿಗೆ ಎಲ್ಲ ಸರಿಹೋಗುತ್ತದೆ ಎಂದು ಅವನಿಗೆ ಅವನ ಹೆಂಡತಿಗೆ ಹೇಳಿ ಇನ್ನೊಂದು ಆಸ್ಪತ್ರೆಗೆ ಕಳಿಸುತ್ತೇವೆ .ಹೆಲಿಕಾಪ್ಟರಿನ ಪೈಲಟ್ಟಿಗೆ 'ತಾಜಾ ಕೆಪೊಚಿನೊ ರೆಡಿ ಇದೆ' ಎಂದು ಸೂ ಹೇಳುತ್ತಾಳೆ .ರಚ್ಚೆ ಹಿಡಿದ ಮಗು ಮತ್ತು ಅವಳ ಅಮ್ಮ ಇಬ್ಬರೂ ಮಲಗಿದ್ದಾರೆ .ಕಾಲು ಮುರಕೊಂಡವನಿಗೆ ಮಾರ್ಫೀನ್ ಕೆಲಸ ಮಾಡುತ್ತಿದೆ .
ಹೊರಗೆ ಬೆಳಗಾಗಿದೆ .ಅವತ್ತಿನ ಪೇಪರು ಬಂದಿದೆ .ಮೈಮುರಿದು, ಹಲ್ಲುಜ್ಜಿ ಪೇಪರ್ವರ್ಕು ಮುಗಿಸಲೆಂದು ಕೂರುತ್ತೇನೆ .ಗ್ರಾಹಕ ತೃಪ್ತಿಯ ಸಮೀಕ್ಷಾ ಕಾರ್ಡುಗಳನ್ನು ಪ್ರತಿ ರೂಮಿನಿಂದ ಹಿಡಿದು ಎಲ್ಲರಿಗೂ ಡೀಬ್ರೀಫ್ ಮಾಡುತ್ತಾಳೆ ಸೂ .ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡುತ್ತಿದ್ದೇವೆಯೇ ಇಲ್ಲವೇ ಎಂದು ಆಸ್ಪತ್ರೆ ನಮ್ಮನ್ನು ಮಾನೀಟರ್ ಮಾಡುವ ರಿಯಲ್ ಟೈಮ್ ಪರಿಯಿದು .ರೆಸ್ಟುರೆಂಟಿಗೆ ಹೋದಾಗ 'ನಮ್ಮ ಸೇವೆ ಹೇಗಿತ್ತು?' ಎಂದು ಕೇಳಿ ನಮ್ಮ ಅನಿಸಿಕೆಗಳನ್ನು ಬರೆದಿಡುವ ಮಾದರಿಯಲ್ಲಿ ಈ ಕಾರ್ಡುಗಳನ್ನೂ ಎಮರ್ಜೆನ್ಸಿ ರೂಮಿನ ಎಲ್ಲ ರೂಮುಗಳಲ್ಲಿ ಇಡುವ ನಿರ್ಧಾರವನ್ನು ಆಸ್ಪತ್ರೆಯ ಮ್ಯಾನೇಜ್ಮೆಂಟ್ ತೆಗೆದುಕೊಂಡು ಬಹಳ ದಿನಗಳಾಗಿವೆ .
'ನನಗೆ ಸರಿಯಾದ ಸಮಯದಲ್ಲಿ ಮಾರ್ಫೀನು ಸಿಕ್ಕದಿದ್ದು ಬಿಟ್ಟರೆ ಉಳಿದದ್ದೆಲ್ಲಾ ಸರಿಯಾಗೇ ಇತ್ತು .ಒಳ್ಳೇ ಡಾಕ್ಟರು, ಒಳ್ಳೇ ನರ್ಸು"
'ಈ ಅಸ್ಪತ್ರೆಯಿಲ್ಲದೇ ಇದ್ದರೆ ನಾನಿನ್ನು ಬದುಕಿರುತ್ತಿರಲಿಲ್ಲ .ಇದೇರೀತಿ ಒಳ್ಳೇ ಕೆಲಸ ಮುಂದುವರೆಸಿ'
'ಯು ಗೈಸ್ ಆರ್ ಎಫ್ಫಿಂಗ್ ಸ್ಲೋ .ಐ ವಿಲ್ ನೆವರ್ ಎಫ್ಫಿನ್ ಸ್ಟೆಪ್ ಇನ್ ಅಗ್ಯೆನ್'

ಇನ್ನೂ ಅನೇಕ ಕಾರ್ಡುಗಳು .ಒಂದರಲ್ಲಿಯೂ ಬರೆದವನ ಹೆಸರಿಲ್ಲ .ಆಸ್ಪತ್ರೆಯ ವೈಟಿಂಗ್ ರೂಮಿನ ಟೀವಿಯ ಪರದೆ ಫ್ಲಾಟ್ ಆಗಿಲ್ಲವೆಂದು ಒಬ್ಬನ ಫಿರ್ಯಾದು .ವೈಟಿಂಗ್ ರೂಮಿನಲ್ಲಿ ನಾಲ್ಕು ಕಂಪ್ಯೂಟರ್ ಇದ್ದು ಎಲ್ಲಕ್ಕೂ ಇಂಟರ್ನೆಟ್ ಕನೆಕ್ಷನ್ ಇದ್ದರೆ ಚೆನ್ನ, ನಿಮ್ಮ ನರ್ಸಿನ ಫರ್ಫ್ಯೂಮ್ ಜಾಸ್ತಿ ಆಯ್ತು, ಡಾಕ್ಟರು ಆಕಳಿಸುತ್ತಾ ಇದ್ದ, ಎಲ್ಲ ನರ್ಸುಗಳಿಗೂ ಒಂದೇ ಯುನಿಫಾರ್ಮ್ ಇದ್ದರೆ ಚೆನ್ನ, ಡಾಕ್ಟರ್ ಲಾಸ್ಟ್ ನೇಮೂ ಫಸ್ಟ್ ನೇಮೂ ಉಚ್ಚಾರ ಮಾಡಲಿಕ್ಕಾಗದು, ಟಾಯ್ಲೆಟ್ಟಲ್ಲಿ ನನಗಿಂತ ಹಿಂದೆ ಹೋಗಿ ಬಂದವನು ಫ್ಲಶ್ ಮಾಡಿರಲಿಲ್ಲ, ಮಕ್ಕಳು ನಿಮ್ಮ ಎಮರ್ಜೆನ್ಸಿ ರೂಮಿನಲ್ಲಿ ಬಹಳ ಅಳುತ್ತವೆ, ಆಂಬುಲೆನ್ಸು ಆಸ್ಪತ್ರೆಗೆ ಬಂದಮೇಲೂ ಅವರ ಸೈರನ್ನು ಹೊಡಕೊಳ್ಳುವುದರಲ್ಲಿ ಏನರ್ಥ, ನಿಮ್ಮ ಡಾಕ್ಟರಿಗೆ ನಗೋಕೆ ಬರೊಲ್ವಾ? ಹೀಗೇ ಪ್ರತಿಕ್ರಿಯೆಗಳು, ಕಮೆಂಟುಗಳು .ಒಂದೊಂದು ರೂಮಿನಲ್ಲಿಯೂ ಮೂರೋ ನಾಲ್ಕೋ ಇದೆ .

ಸೂಸನ್ ನಗುತ್ತಾಳೆ' .ರೂಮಿನಲ್ಲಿ ಯಾರಿದ್ದರು ಅನ್ನೋದು ನಮಗೆ ಗೊತ್ತಾಗೋದಿಲ್ವಾ .ಈ ಅನಾನಿಮಿಟಿಗೆ ಏನರ್ಥ?' ಎಂದು ಕೊನೆಯ ಕಾರ್ಡು ತೆಗೆಯುತ್ತಾಳೆ.


'ಎಲ್ಲರಿಗೂ ದೇವರು ಒಳ್ಳೇದು ಮಾಡಲಿ .ಮಿಸೆಸ್ ರಾಬಿನ್ಸನ್, ಮೇ ೧೬, ೨೦೦೯'.

ಒಂದೇ ಸಮೀಕ್ಷೆಗೆ ಹೆಸರಿರುವುದು .ಕೊಂಚ ಎಡಕ್ಕೆ ವಾಲಿದ ಅಕ್ಷರಗಳು, ಎಮ್‌ನ ಹಳ್ಳದಲ್ಲಿ ಒಂದು ಸ್ಮೈಲಿ ಫೇಸಿದೆ .ಆರ್‌ನ ಹೊಕ್ಕುಳು ಆಳವಾಗಿ ಸೀಳಿದೆ .ಐಗೆ ಮತ್ತು ಕೊನೆಯಲ್ಲಿ ಚುಕ್ಕಿಗೆ ಬದಲು ಒಂದು ಸಣ್ಣ ಸೊನ್ನೆಯಿದೆ .ಯು ಆರ್ ಅ ಬಂಚ್ ಆಫ್ ಸ್ವೀಟ್ಹಾರ್ಟ್ಸ್ ಎಂದಿದೆ .

-*-

ಟೀಕೆ - ಟಿಪ್ಪಣಿ

## ಕೆಣಕು-ತಿಣುಕು ಉತ್ತರಗಳು




ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.

*ಹಿತ್ತಲ ಗಿಡ ಮದ್ದಲ್ಲ*

ಟೀಕೆ - ಟಿಪ್ಪಣಿ

ಮುಖಪುಟ